ಸಂಪುಟ : 8 ಸಂಚಿಕೆ 301 ಪುಟ : 4 ಬೆಲೆ : 3.00 ಗುರುವಾರ ಜನವರಿ 11, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 301 Pages : 4 Price : 3.00 Thursday JANUARY 11, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಜನವರಿ 11 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 20, 21, 23 ಹಾರೋಗೆರಿ ಭಾಗ 1,2 ಹೆಬಸೂರ ಲೈನ್, ಹೊನ್ನೆತ್ತಮ್ಮನ ಗುಡಿ ಭಾಗ 1,2 ಕಮತರ ಲೈನ್, ಸೋಮನಗೌಡ್ರ ಲೈನ್, ಕಾಳಮ್ಮನ ಗುಡಿ, ವಿಭೂತಿಯವರ ಓಣಿ, ಹನುಮನ ಗರಡಿ, ದ್ರೌಪತಿ ಬಾಯಿ ಲೈನ್, ಮಾನ್ವಿಯವರ ಲೈನ್, ಪಡಗದರವರ ಭಾಗ –1,2, ಜಂತ್ಲಿಯವರ ಲೈನ್, ಜಂತ್ಲಿಯವರ ಹೊಸ ಲೈನ್, ಕುಂಬಾರ ಲೈನ್, ಉಸುಗಿನ ಕಟ್ಟಿ, ದ್ಯಾಮವ್ವನ ಕಟ್ಟಿ, ಲಕ್ಕುಂಡಿಯವರ ಲೈನ್, ಗಣಪತಿ ಗುಡಿ.

ವಾರ್ಡ್ ನಂ. 15, 16,17 ಶಹಾಪುರ ಪೇಟೆ, ಡಿಸಿ ಮಿಲ್ ರೋಡ್, ಜವಳಗಲ್ಲಿ, ಮಹೇಂದ್ರಕರ್ ಸರ್ಕಲ್ ಲೈನ್, ಗಾಂಧಿ ಸರ್ಕಲ್ ಲೈನ್, ಮೀನದ ಮಾರ್ಕೆಟ್, ಶರಣ ಬಸವೇಶ್ವರ ಗುಡಿ ಲೈನ್, ಗಣೇಶ ಗುಡಿ ಲೈನ್

ವಾರ್ಡ್ ನಂ. 24, 26 ಅಬ್ಬಿಗೇರಿ ಕಾಂಪೌಂಡ್, ಕಮ್ಮಾರ ಸಾಲ, ಸಾಲಮನೆ, ತೆಗ್ಗಿನ ಪ್ಲಾಟ್, ಉಡಚಮ್ಮನ ಗುಡಿ, ಮಕಾನಗಲ್ಲಿ ಕೆಲವು ಭಾಗಗಳು. ವಾರ್ಡ್ ನಂ. 2 ಸೆಟ್ಲಮೆಂಟ ಪೂರ್ತಿ ಭಾಗಗಳು.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಳೆ ಮುಂಡರಗಿಯಲ್ಲಿ ಜಿಲ್ಲಾಧಿಕಾರಿಗಳ ಜನತಾ ದರ್ಶನ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ಜ.12 ರಂದು ಮಧ್ಯಾಹ್ನ ಮುಂಡರಗಿ ತಾಲೂಕಿನಲ್ಲಿ ಜನತಾ ದರ್ಶನ ಕಾರ್ಯಕ್ರಮ ಜರುಗಿಸುವರು. ಮುಂಡರಗಿ ತಾಲೂಕು ಪಂಚಾಯತ ಸಭಾಂಗಣದಲ್ಲಿ ಮಧ್ಯಾಹ್ನ 3 ಗಂಟೆಗೆ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸುವರು ಎಂದು ಪ್ರಕಟಣೆ ತಿಳಿಸಿದೆ.

### 6 ಸಾವಿರ ಮಕ್ಕಳಿಗಾಗಿ 'ಅಕ್ಷರ-2024' ಕಾರ್ಯಕ್ರಮ ಆಯೋಜನೆ | ಮುಪ್ಪಿನ ಬಸವಲಿಂಗ ಸ್ವಾಮೀಜಿ ಮಾಹಿತಿ

# ಜ.13ರಿಂದ ಅನ್ನದಾನೇಶ್ವರ ಶ್ರೀಗಳ ಜಾತ್ರೆ

■ವಿಜಯಸಾಕ್ಷಿ ಸುದ್ದಿ, ಗದಗ

ಹಣ ಗಳಿಕೆಯೇ ಮುಖ್ಯವಾಗಿರುವ ಪ್ರಸ್ತುತ ಕಾಲದಲ್ಲಿ ಮಕ್ಕಳಿಗೆ ಪರಿಸರ, ಸಂಬಂಧ, ಜೀವನ ಮೌಲ್ಯಗಳು ಮುಖ್ಯ ಎನ್ನುವುದನ್ನು ಅರ್ಥೈಸಲು ಅನ್ನದಾನೇಶ್ವರ ಜಾತ್ರೆಯಲ್ಲಿ 'ಅಕ್ಷರ–2024' ಎಂಬ ಕಾರ್ಯಕ್ರಮ ಸಂಘಟಿಸಲಾಗಿದೆ ಎಂದು ಹಾಲಕೆರೆ ಶ್ರೀ ಅನ್ನದಾನೇಶ್ವರ ಸಂಸ್ಥಾನಮಠದ ಮುಪ್ಪಿನ ಬಸವಲಿಂಗ ಸ್ವಾಮೀಜಿ ಹೇಳಿದರು.



ನಗರದ ಆನಂದಾಶ್ರಮದಲ್ಲಿ ಬುಧವಾರ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶ್ರೀಗಳು, ಜಾತ್ರೆ ಎಂದರೆ ಜನರನ್ನು ಸೇರಿಸಿ ಉತ್ಸವ ಮಾಡುವುದಷ್ಟೇ ಅಲ್ಲ. ಸಮಾಜಕ್ಕೆ ಉಪಯುಕ್ತವಾಗುವ ಕಾರ್ಯಗಳನ್ನು ಅನುಷ್ಠಾನಗೊಳಿಸುವ ಪುಣ್ಯಕಾರ್ಯ. ಹಾಲಕೆರೆಯಿಂದ ಉಳವಿಯವರೆಗೆ ಬಂಡಿ ಯಾತ್ರೆ ಮೂಲಕ ಸಾವಯವ ಕೃಷಿ ಜಾಗೃತಿ ಕೈಗೊಂಡ ಹಾಲಕೆರೆ ಮಠ, ಅದೇ ಪರಂಪರೆಯಲ್ಲಿ ವಿನೂತನ ಕಾರ್ಯಕ್ರಮ ಸಂಘಟಿಸಿದೆ ಎಂದರು.

ಜನವರಿ 13 ಮತ್ತು 14ರಂದು ಲಿಂ. ಹಿರಿಯ ಅನ್ನದಾನ ಸ್ವಾಮಿಗಳ 111ನೇ ಪುಣ್ಯಸ್ಮರಣೆ, ಲಿಂ. ಡಾ. ಅಭಿನವ ಅನ್ನದಾನ ಶ್ರೀಗಳ 2ನೇ ಪುಣ್ಯಸ್ಮರಣೆ ಹಾಗೂ 173ನೇ ಅನ್ನದಾನೇಶ್ವರ ಮಹಾರಥೋತ್ಸವ ನಡೆಯಲಿದ್ದು, 'ಅಕ್ಷರ–2024' ಈ ಸಲದ ಜಾತ್ರೆಯ ವಿಶಿಷ್ಟ ಕಾರ್ಯಕ್ರಮವಾಗಿದೆ. ಇದರೊಂದಿಗೆ ವಸ್ತು ಪ್ರದರ್ಶನವೂ ನಡೆಯಲಿದೆ. ಈಗಾಗಲೇ ಅಕ್ಷರ ಗ್ರಂಥಾಲಯಕ್ಕೆ ರೋಣ ಶಾಸಕ ಜಿ.ಎಸ್. ಪಾಟೀಲ ಚಾಲನೆ ನೀಡಿದ್ದು, 50 ಲಕ್ಷ ರೂ. ಅನುದಾನ ಒದಗಿಸುವ ಭರವಸೆ ನೀಡಿ–ದ್ದಾರೆ. ಅದೇ ರೀತಿ ಶ್ರೀಮಠದಿಂದ ಅಕ್ಷರ ಭಾರತ ಪ್ರತಿಷ್ಠಾನದ ಮೂಲಕ ಹಳ್ಳಿಹಳ್ಳಿಗೆ ಹೋಗಿ ಸಾವಯವ ಕೃಷಿ ಕುರಿತು ಜಾಗೃತಿ ಕಾರ್ಯಕ್ರಮ ಮಾಡಲಿದ್ದೇವೆ ಎಂದರು.

> ಈ ಬಾರಿ ಜಾತ್ರೆಯ ಅಂಗವಾಗಿ 6 ಸಾವಿರ ಮಕ್ಕಳಿಗೆ ನೀತಿ ಪಾಠ ಕಲ್ಪಿಸುವ ಸಂಕಲ್ಪದೊಂದಿಗೆ ಜಾತ್ರೆ ಇನ್ನಷ್ಟು ಅರ್ಥಪೂರ್ಣವಾಗಿ ನೆರವೇರಲಿದೆ. ನೆರೆಯ ಜಿಲ್ಲೆಗಳ ವಿವಿಧ ಶಾಲೆಗಳ ಮಕ್ಕಳನ್ನು ಜಾತ್ರೆಗೆ ಕರೆತಂದು, ಅವರಿಗೆ ನೀತಿ ಶಿಕ್ಷಣ ಕೊಡುವ ಸಂಕಲ್ಪ ಮಾಡಿದ್ದೇವೆ. ಭವಿಷ್ಯದಲ್ಲಿ 10 ಸಾವಿರ ಮಕ್ಕಳಿಗೆ ಈ ರೀತಿಯ ಪಾಠಗಳನ್ನು 'ಅಕ್ಷರ–2024' ಕಾರ್ಯಕ್ರಮದ ಅಡಿಯಲ್ಲಿ ನೀಡುವ ಚಿಂತನೆ ಹೊಂದಿದ್ದೇವೆ ಎಂದು ಶ್ರೀಗಳು ಮಾಹಿತಿ ನೀಡಿದರು.

ಜ. 13ರಂದು ನಡೆಯುವ ಜಾತ್ರಾ ಮಹೋತ್ಸವವನ್ನು ಕಾನೂನು ಹಾಗೂ ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಉದ್ಘಾಟಿಸಲಿದ್ದಾರೆ.

▸▸3ನೇ ಪುಟಕ್ಕೆ

## ಗಣರಾಜ್ಯೋತ್ಸವ ಅರ್ಥಪೂರ್ಣ ಆಚರಣೆಗೆ ಜಿಲ್ಲಾಧಿಕಾರಿ ಸೂಚನೆ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಮಟ್ಟದಲ್ಲಿ ಜನವರಿ 26 ರಂದು ಜರುಗಲಿರುವ ಗಣರಾಜ್ಯೋತ್ಸವ ದಿನಾಚರಣೆಯನ್ನು ಅರ್ಥಪೂರ್ಣ ಹಾಗೂ ವಿಜ್ರಂಭಣೆಯಿಂದ ಆಚರಿಸಲು ಅಗತ್ಯದ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲು ಜಿಲ್ಲಾಧಿಕಾರಿ ವೈಶಾಲಿ.ಎಂ.ಎಲ್. ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರದಂದು ಜರುಗಿದ ಗಣರಾಜ್ಯೋತ್ಸವ ದಿನಾಚರಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾಮಟ್ಟದ ಗಣ ರಾಜ್ಯೋತ್ಸವ ದಿನಾಚರಣೆ ಆಚರಣೆಗೆ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಸಮಿತಿಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಜರುಗಿಸಬೇಕು. ಕಾರ್ಯಕ್ರಮದಲ್ಲಿ ಯಾವುದೇ ಲೋಪಗಳಿಗೆ ಆಸ್ಪದ ನೀಡದೆ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವಂತೆ ತಿಳಿಸಿದರು.

ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಎರಡು ದಿನಗಳ ಕಾಲ ಸರ್ಕಾರಿ ಕಚೇರಿ ಹಾಗೂ ನಗರದ ವಿವಿಧ ವೃತ್ತಗಳಲ್ಲಿ ಸ್ವಚ್ಛತೆಯೊಂದಿಗೆ ವಿದ್ಯುತ್ ದೀಪಾಲಂಕಾರಕ್ಕೆ ಕ್ರಮ ಕೈಗೊಳ್ಳಬೇಕು. ಗಣರಾಜ್ಯೋತ್ಸವ ದಿನದಂದು ಎಲ್ಲ ಕಚೇರಿ ಮತ್ತು ಶಾಲಾ ಕಾಲೇಜುಗಳ ಸಿಬ್ಬಂದಿ ತಮ್ಮ ಕಾರ್ಯಾಲಯದ ಧ್ವಜಾರೋಹಣವನ್ನು ಬೆ.7.30 ರೊಳಗೆ ನೆರವೇರಿಸಿ ಬೆ.8.30 ಗಂಟೆಗೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಹಾಜರಾಗಬೇಕು. ಅಂದು ಬೆ. 9 ಗಂಟೆಗೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿಂದ ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮ ಜರುಗಲಿದ್ದು, ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಾಗಬೇಕು ಎಂದು ಸೂಚಿಸಿದರು.

ಕಾರ್ಯಕ್ರಮದ ಸ್ಥಳದ ಸ್ವಚ್ಛತೆ ಹಾಗೂ ಅತಿಥಿಗಳಿಗೆ ಆಸನದ ವ್ಯವಸ್ಥೆ, ಅಲ್ಪೋಪಹಾರದ ವ್ಯವಸ್ಥೆ ಕುರಿತು ಕ್ರಮ ಕೈಗೊಳ್ಳಬೇಕು. ವಿವಿಧ ರಂಗಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನಿಸುವ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು.

▸▸3ನೇ ಪುಟಕ್ಕೆ

### ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಗ್ರಾಮಸ್ಥರ ಮನವಿ

## ಲೋಕಾಯುಕ್ತರಿಂದ ಅಹವಾಲು ಸ್ವೀಕಾರ

■ವಿಜಯಸಾಕ್ಷಿ ಸುದ್ದಿ, ರೋಣ

ಲಕ್ಕಲಕಟ್ಟಿ ಗ್ರಾ.ಪಂನಲ್ಲಿ ಭಾರೀ ಪ್ರಮಾಣದ ಭ್ರಷ್ಟಾಚಾರ ನಡೆದಿದ್ದು, ತನಿಖೆ ನಡೆಸಬೇಕೆಂದು ಆಗ್ರಹಿಸಿ ಲಕ್ಕಲಕಟ್ಟಿ ಗ್ರಾಮಸ್ಥರು ಲೋಕಾಯುಕ್ತಾಧಿಕಾರಿ ವಿಜಯ ಬಿರಾದಾರರಿಗೆ ಬುಧವಾರ ಮನವಿ ಸಲ್ಲಿಸಿದರು.




ಗ್ರಾ.ಪಂ ವ್ಯಾಪ್ತಿಯಲ್ಲಿ ಹಲವಾರು ಕಾಮಗಾರಿಗಳಿಗೆ ಕ್ರಿಯಾಯೋಜನೆ ರೂಪಿಸಲಾಗಿದೆ. ಆದರೆ ಕಾಮಗಾರಿಗಳು ನಡೆದಿಲ್ಲ. ಅಧಿಕಾರಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ಲಕ್ಷಾಂತರ ರೂ ಅನುದಾನವನ್ನು ನುಂಗಿದ್ದಾರೆ ಎಂದು ಆರೋಪಿಸಿದರಲ್ಲದೆ, ಕೂಡಲೇ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಗ್ರಾಮದ ರೈತರಿಗೆ ಎಷ್ಟೋ ಯೋಜನೆಗಳು ತಲುಪದಿದ್ದರೂ ಅನುದಾನ ಖರ್ಚಾಗಿದೆ. ಸಿಸಿ ರಸ್ತೆಗಳು ಸೇರಿದಂತೆ ನಮ್ಮ ಹೊಲ ನಮ್ಮ ದಾರಿ ಹಾಗೂ ಗ್ರಾ.ಪಂಗಳಿಂದ ಹಮ್ಮಿಕೊಳ್ಳುವ ಅನೇಕ ಯೋಜನೆಗಳಲ್ಲಿ ಅನುದಾನವನ್ನು ಖರ್ಚು ಮಾಡಲಾಗಿದೆ. ಈ ಕುರಿತು ಅನೇಕ ಬಾರಿ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದರೂ ಸಹ ಪ್ರಯೋಜನವಾಗಿಲ್ಲ. ಈ ವಿಚಾರವಾಗಿ ಗ್ರಾಮಸ್ಥರಿಗೆ ನ್ಯಾಯ ಒದಗಿಸಬೇಕು ಎಂದು ಗ್ರಾಮಸ್ಥರು ಲೋಕಾಯುಕ್ತ ಅಧಿಕಾರಿಗಳ ಬಳಿ ಮನವಿ ಮಾಡಿದರು.

> ಅರಣ್ಯ ಇಲಾಖೆಯ ಕ್ರಿಯಾಯೋಜನೆ ಬಗ್ಗೆ ನಮಗೆ ಹೇಳಬೇಡಿ. ಕ್ರಿಯಾಯೋಜನೆ ಅನ್ನುವುದು ನಂಬಿಕೆ ಕಳೆದುಕೊಂಡಿದೆ. 9 ಸಾವಿರ ಸಸಿಗಳ ಬದಲು 2 ಸಾವಿರ ಸಸಿಗಳನ್ನು ನೆಟ್ಟು ಬೆಳೆಸಲು ಅಗತ್ಯ ಕ್ರಮ ಕೈಗೊಂಡರೂ ಸಮಾಜಕ್ಕೆ ಒಳಿತಾದೀತು ಎಂದು ಡಿಆರ್‌ಎಫ್ ವಿಜಯಕುಮಾರ ಮಳಗಿರವರನ್ನು ಡಿವಾಯ್‌ಎಸ್ಪಿ ವಿಜಯ ಬಿರಾದಾರ ತರಾಟೆಗೆ ತೆಗೆದುಕೊಂಡರು.

ತಹಸೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಜರುಗಿದ ಸಾರ್ವಜನಿಕರ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ತಾಲೂಕಾ ಮಟ್ಟದ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಡಿವಾಯ್‌ಎಸ್ಪಿ ವಿಜಯ ಬಿರಾದಾರ, ಸರಕಾರದ ಯೋಜನೆಗಳನ್ನು ಫಲಾನುಭವಿಗಳಿಗೆ ಮುಟ್ಟಿಸುವಲ್ಲಿ ವಿಳಂಬ ಧೋರಣೆ ಅನುಸರಿಸಬಾರದು. ಮಧ್ಯವರ್ತಿಗಳ ಮೂಲಕ ಲಂಚದ ಬೇಡಿಕೆ ಇಡುವುದು ಹಾಗೂ ಸಿಬ್ಬಂದಿಗಳು ಫಲನಾಭವಿಗಳ ಬಳಿ ಹಣ ಕೇಳುವುದು ಸರಿಯಲ್ಲ. ಇದರಿಂದ ನಿಮ್ಮ ಜೀವನ ಹಾಳಾಗಲಿದೆ ಎಂದು ಎಚ್ಚರಿಸಿದ ಅವರು, ಸರಕಾರ ನಿಗದಿಪಡಿಸಿದ ದರಗಳ ನಾಮಫಲಕವನ್ನು ಕಚೇರಿಯಲ್ಲಿ ಹಾಕಬೇಕು ಎಂದು ಪುರಸಭೆಗೆ ಸೂಚಿಸಿದರು.

ಅಧಿಕಾರಿಗಳಾದ ರವಿ ಪುರಯಷೋತ್ತಮ, ಎಸ್.ಎಸ್. ತೇಲಿ, ತಹಸೀಲ್ದಾರ್ ಕೆ.ನಾಗರಾಜ, ಉಪತಹಸೀಲ್ದಾರ್ ಜೆ.ಟಿ. ಕೊಪ್ಪದ, ಎಚ್.ಬಿ. ಲಕ್ಕನಗೌಡ್ರ ಸೇರಿದಂತೆ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ನಮಗ ದಿಕ್ಕು ತಿಳಿದಂಗ ಆಗೈತ್ರಿ ಸಾಹೇಬ್ರ...

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಮೀಪದ ಸೂರಣಗಿ ಗ್ರಾಮದಲ್ಲಿ ನಟ ಯಶ್ ಜನ್ಮದಿನಾಚರಣೆಗೆ ಸಿದ್ಧತೆ ನಡೆಸುತ್ತಿದ್ದ ವೇಳೆ ವಿದ್ಯುತ್ ಸ್ಪರ್ಶದಿಂದ ಮೂವರು ಯುವಕರು ದುರ್ಮರಣಕ್ಕೀಡಾಗಿರುವ ಹಿನ್ನೆಲೆಯಲ್ಲಿ ಬಿಜೆಪಿ ನಾಯಕರು ಬುಧವಾರ ಮೃತರ ಮನೆಗೆ ಭೇಟಿ ನೀಡಿ ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.




ನರಗುಂದ ಶಾಸಕ ಸಿ.ಸಿ. ಪಾಟೀಲ, ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ, ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಮತ್ತಿತರರು ಮೃತ ಮುರುಳಿ, ನವೀನ್ ಮತ್ತು ಹನುಮಂತರ ಮನೆಗಳಿಗೆ ತೆರಳಿ ಸಾಂತ್ವನ ಹೇಳಿದರು. 'ಮನೆಗೆ ಆಧಾರವಾಗಿದ್ದ ನಮ್ಮ ಮಕ್ಕಳನ್ನು ಕಳೆದುಕೊಂಡು ನಾವು ಹೆಂಗೆ ಜೀವನ ನಡೆಸಬೇಕ್ರೀ, ನಮಗ ದಿಕ್ಕು ತಿಳಿದಂಗ ಆಗೈತ್ರಿ ಸಾಹೇಬ್ರ. ನೀವ ದಾರಿ ತೋರಿಸರಿ, ನಮ್ಮ ಕುಟುಂಬ ನಡಸವರು ಇಲ್ಲದಂಗ ಆತ್ರಿ' ಎಂದು ಕಣ್ಣೀರು ಹಾಕಿದರು.

ಶಾಸಕ ಸಿ.ಸಿ. ಪಾಟೀಲ ಮಾತನಾಡಿ, ಈ ಕುಟುಂಬದ ದುಃಖದಲ್ಲಿ ನಾವೆಲ್ಲರೂ ಇದ್ದೇವೆ. ಹೆತ್ತವರ ನೋವು ಅರ್ಥವಾಗುತ್ತದೆ. ಮನೆಗೆ ಆಧಾರವಾಗಿದ್ದ ಮಕ್ಕಳೇ ಆಕಸ್ಮಿಕವಾಗಿ ಕಳೆದುಹೋದಾಗ ನೋವು ತಡೆದುಕೊಳ್ಳಲಾಗುವದಿಲ್ಲ. ಕುಟುಂಬಕ್ಕೆ ಸರಕಾರದಿಂದ ದೊರೆಯಬೇಕಾದ ಸೌಲಭ್ಯ ದೊರಕಿಸಲು ಪ್ರಯತ್ನ ಮಾಡುವದಾಗಿ ಹೇಳಿದರಲ್ಲದೆ, ವಯಕ್ತಿಕವಾಗಿ ಮೃತರ ಕುಟುಂಬಕ್ಕೆ ತಲಾ 10 ಸಾವಿರ ರೂ ಪರಿಹಾರ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಅಧ್ಯಕ್ಷ ಫಕ್ಕೀರೇಶ ರಟ್ಟಿಹಳ್ಳಿ, ಗಂಗಾಧರ ಮೆಣಸಿನಕಾಯಿ, ದುಂಡೇಶ್ ಕೊಟಗಿ, ಬಸವರಾಜ್ ಇಟಗಿ, ಸಂತೋಷ ಚಕ್ರಸಾಲಿ, ಅನಿಲ್ ಮುಳಗುಂದ, ನಾಗರಾಜ್ ಹುನುಗುಂದ್, ನವೀನ್ ಹಿರೇಮಠ, ಕಲಂದರ್ ಕುರಿ, ಅಶೋಕ್ ಹಾವೇರಿ, ಶಕ್ತಿ ಕತ್ತಿ ಮುಂತಾದವರಿದ್ದರು.

## ಜಿಮ್ಸ್‌ನ 'ಡಿ' ದರ್ಜೆ ನೌಕರರಿಂದ ಪ್ರತಿಭಟನೆ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮೇಲಧಿಕಾರಿಗಳಿಂದ ಹೊರಗುತ್ತಿಗೆ ನೌಕರರ ಗ್ರೂಪ್–ಡಿ ಕಾರ್ಮಿಕರ ಮೇಲಾಗುತ್ತಿರುವ ಕಿರುಕುಳ, ವೇತನ ಹೆಚ್ಚಳ ಮತ್ತು ಕೋವಿಡ್ ರಿಸ್ಕ್ ಭತ್ಯೆ ನೀಡಲು ಒತ್ತಾಯಿಸಿ ಬುಧವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಜಿಮ್ಸ್ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ ಕಾರ್ಮಿಕರ ಮನವಿ ಸ್ವೀಕರಿಸಿ, ಮನವಿಯಲ್ಲಿರುವ ಎಲ್ಲ ಸಮಸ್ಯೆಗಳಿಗೆ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ರಾಜು ಎಸ್.ಸಾಬೋಜಿ, ರಜಿಯಾ ಅನ್ಸಾರೆ, ಮಂಜುನಾಥ ದೊಡ್ಡಮನಿ, ಮಮತಾಜ ರೋಣ, ಮಾಂತೇಶ ದೊಡ್ಡಮನಿ, ಇಜಾಜಖಾನ್ ಧಾರವಾಡ, ಭರತ ಸೊನ್ನದ, ವಿಜಯಲಕ್ಷ್ಮೀ ಗೊಲ್ಲರ, ರಾಘವೇಂದ್ರ ಎಸ್.ಎನ್., ಮೈಲಾರಿ ಹಾದಿಮನಿ, ಮಾರ್ತಾಂಡ ಹೊನ್ನಿನಾಯ್ಕರ್, ಚಂಪಾವತಿ ಗುಳೇಶ, ವೇದಾ ಸುಣಗಾರ, ವಿವೇಕ ಮಾನೆ, ಹುಲಗೇಶ ಚೌಡಮ್ಮನವರ, ನಾಗರಾಜ ಯರಗುಡಿ, ವೆಂಕಟೇಶ ಕುರ್ತಕೋಟಿ, ವಿನಾಯಕ ವಾಲ್ಮೀಕಿ, ಗಿರೀಶ ಗುರಿಕಾರ ಸೇರಿದಂತೆ ಜಿಮ್ಸ್‌ನ ಎಲ್ಲಾ ಹೊರಗುತ್ತಿಗೆ ನೌಕರರು ಹಾಗೂ ಗ್ರೂಪ್–ಡಿ ಕಾರ್ಮಿಕರು ಭಾಗವಹಿಸಿದ್ದರು.

## ಸಾಕ್ಷಿ ಸುಭಾಷಿತ

ದೇವರ ನುಡಿಯನ್ನು ನಿಮ್ಮ ಕಿವಿಯಿಂದಲ್ಲ ಹೃದಯದಿಂದ ಕೇಳಿಸಿಕೊಳ್ಳಿ

–ಸುಭಾಷಿತ

## ಸಂಪಾದಕೀಯ

# ಆರೋಗ್ಯ ಭಾಗ್ಯ ಕೊಡದ ಸರ್ಕಾರ

ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಪಂಚ ಗ್ಯಾರಂಟಿಗಳನ್ನು ನೀಡಿದೆ. ಆದರೆ ಜನರ ಆರೋಗ್ಯ ರಕ್ಷಣೆಯ ವಿಷಯದಲ್ಲಿ ಯಾವುದೇ ಗ್ಯಾರಂಟಿ ನಿರ್ಧಾರಗಳನ್ನು ಕೈಗೊಳ್ಳದ ಕಾರಣ, ರಾಜ್ಯ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನ ದಾಖಲಿಸಿಕೊಂಡಿದೆ.

ರಾಜ್ಯದ ಸರಕಾರಿ ಆಸ್ಪತ್ರೆಗಳಲ್ಲಿ 15 ಸಾವಿರಕ್ಕೂ ಹೆಚ್ಚು ವೈದ್ಯಕೀಯ ಸಿಬ್ಬಂದಿ ಕೊರತೆ ಇರುವುದನ್ನು ಮನಗಂಡಿರುವ ಹೈಕೋರ್ಟ್, ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಾಖಲಿಸಿಕೊಳ್ಳುವ ಮೂಲಕ ಸರ್ಕಾರಕ್ಕೆ ಚಾಟಿ ಬೀಸಲು ಮುಂದಾಗಿದೆ.

ಹೈಕೋರ್ಟ್ ಈ ಹಿಂದೆಯೂ ಅನೇಕ ಜ್ವಲಂತ ವಿಷಯಗಳ ಕುರಿತಾಗಿ ಪ್ರಕರಣ ದಾಖಲಿಸಿಕೊಂಡು ರಾಜ್ಯ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡಿದೆ. ಆದರೆ ರಾಜ್ಯ ಸರ್ಕಾರ ಯಾವುದಕ್ಕೂ ಸೊಪ್ಪು ಹಾಕದೆ, ರಂಗೋಲಿ ಕೆಳಗೆ ನುಗ್ಗುವ ತಂತ್ರಗಾರಿಕೆಯನ್ನು ಅನುಸರಿಸುತ್ತಲೇ ಬಂದಿದೆ.

ಆದರೆ ಹೈಕೋರ್ಟ್ ಕೈಗೆತ್ತಿಕೊಂಡಿರುವ ಸಂಗತಿ ಅತ್ಯಂತ ಗಂಭೀರವಾಗಿದೆ. ಕೋವಿಡ್ ಸಂಕಷ್ಟ ಕಳೆಯಿತು ಎನ್ನುವಷ್ಟರಲ್ಲಿ ಅದರ ರೂಪಾಂತರಿ ತಳಿ ಮತ್ತೆ ಕಾಣಿಸಿಕೊಂಡಿದೆ. ಹೊಸ ಕೋವಿಡ್ ಸಂಕಷ್ಟ ಎದುರಿಸಲು ಆರೋಗ್ಯ ಇಲಾಖೆಯು ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಂಡಿದೆ. ರಾಜ್ಯ ಸರ್ಕಾರ ಅನೇಕ ಮಾರ್ಗಸೂಚಿಗಳನ್ನು ಹೊರಡಿಸಿ ಕೋವಿಡ್ ನಿಯಂತ್ರಣಕ್ಕೆ ಮುಂದಾಗಿದೆ.

ಆದರೆ ಕೋವಿಡ್ ಚಿಕಿತ್ಸೆ ನೀಡಬೇಕಾದ ವೈದ್ಯರ ಕೊರತೆ ಇರುವುದನ್ನ ಹೈಕೋರ್ಟ್ ಎತ್ತಿ ಹಿಡಿದಿದೆ. ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ 15,000ಕ್ಕೂ ಹೆಚ್ಚು ವೈದ್ಯಕೀಯ ಹುದ್ದೆಗಳು ಖಾಲಿ ಇರುವ ಕುರಿತು ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ. ಅದರಲ್ಲೂ ಗ್ರಾಮೀಣ ಭಾಗದಲ್ಲಿ ವೈದ್ಯರ ಕೊರತೆ ಗಂಭೀರ ವಿಷಯ ಎನ್ನುವುದನ್ನು ಉಲ್ಲೇಖಿಸಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಕೊರತೆ ವಿಷಯ ವರ್ಷಗಳಿಂದ ಚರ್ಚೆಯಲ್ಲಿದೆ. ಈ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ವೈದ್ಯರ ನೇಮಕದ ಕುರಿತು ಹಕ್ಕೊತ್ತಾಯ ಕೇಳಿ ಬಂದಿತ್ತು. ಆಗಲೂ ವೈದ್ಯರ ನೇಮಕ ಆಗಲಿಲ್ಲ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿಯೂ ವೈದ್ಯರ ನೇಮಕದ ಬಗ್ಗೆ ಚರ್ಚೆಯಾಗುತ್ತಿಲ್ಲ.

ಬಡವರ ಆರೋಗ್ಯ ರಕ್ಷಣೆ ವಿಷಯದಲ್ಲಿ ಕಾಂಗ್ರೆಸ್ ಸರ್ಕಾರ ರಾಜಿ ಮಾಡಿಕೊಳ್ಳದೆ, ತಕ್ಷಣ ಸರ್ಕಾರಿ ಆಸ್ಪತ್ರೆಗೆ ಬೇಕಾದ ವೈದ್ಯರು, ವೈದ್ಯಕೀಯ ಸಿಬ್ಬಂದಿ ಮತ್ತು ಸಲಕರಣೆಗಳನ್ನು ಒದಗಿಸಬೇಕು. ಜನರ ಆರೋಗ್ಯ ರಕ್ಷಣೆ ವಿಷಯದಲ್ಲಿ ಯಾರ ಸೂಚನೆಗೂ ಕಾಯದೆ, ತಕ್ಷಣ ಅದನ್ನು ಪರಿಹರಿಸಬೇಕು. ಶಿಕ್ಷಣ ಮತ್ತು ಆರೋಗ್ಯ ಅತಿ ಅವಶ್ಯ ಮತ್ತು ಮುಖ್ಯ ಸಂಗತಿಯಾಗಿದ್ದು, ಆ ವಿಷಯದಲ್ಲಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಉದಾಸೀನ ಮಾಡದಿರಲಿ.

# ಗ್ರಾಮ ಒನ್ ಕೇಂದ್ರಗಳಿಗೆ ಅರ್ಜಿ ಆಹ್ವಾನ

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲೆಯಲ್ಲಿ ಖಾಲಿ ಇರುವ ಗದಗ ತಾಲೂಕಿನ ಬೆಳಹೊಡ, ಹಾತಲಗೇರಿ ಲಕ್ಷ್ಮೇಶ್ವರ ತಾಲೂಕಿನ ಆದರಹಳ್ಳಿ, ಹುಲ್ಲೂರು ಮುಂಡರಗಿ ತಾಲೂಕಿನ ಶಿವಾಜಿನಗರ ಗ್ರಾಮ ಪಂಚಾಯತಿಗಳ ಗ್ರಾಮ ಒನ್ ಕೇಂದ್ರಗಳಿಗೆ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ದಿನಾಂಕ:20–01–2024 ರೊಳಗಾಗಿ ಅರ್ಜಿಗಳನ್ನು https://www.karnatakaone.gov.in/Public/GramOneFranchiseeTerms ನಲ್ಲಿ ಆನ್ ಲೈನ್ ಮೂಲಕ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 18 ಎಕರೆ ಕಡಲೆ ಗೂಡು ಕಳುವು



**■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಸಮೀಪದ ಹರ್ಲಾಪೂರ ಗ್ರಾಮದ ಜಮೀನೊಂದರಲ್ಲಿ ಗೂಡು ಹಾಕಿದ್ದ 18 ಎಕರೆಯ ಕಡಲೆ ಬೆಳೆಯು ಕಳುವಾದ ಪ್ರಕರಣ ತಡವಾಗಿ ಬೆಳಕಿದೆ ಬಂದಿದೆ.

ರೈತ ಭರಮಗೌಡ ಸಿದ್ದರಾಮನಗೌಡ ಉಮಚಗಿ ಅವರಿಗೆ ಸೇರಿದ ಜಮೀನಿನಲ್ಲಿ ಕಟಾವಿಗೆ ಬಂದಿದ್ದ ಕಡಲೆ ಬೆಳೆಯನ್ನು ಕಟಾವು ಮಾಡಿ ಟ್ರ್ಯಾಕ್ಟರ್ ಮೂಲಕ ತಂದು ಗ್ರಾಮದ ಸಮೀಪವಿರುವ ತಮ್ಮ ಜಾಗದಲ್ಲಿ ಗೂಡು ಹಾಕಿದ್ದರು. ಶುಕ್ರವಾರ ರಾತ್ರಿಯೇ ಕಳ್ಳರು ಈ ಗೂಡನ್ನು ಕಳ್ಳತನ ಮಾಡಿದ್ದಾರೆ. ಸುಮಾರು 2.50 ಲಕ್ಷ ರೂ ಮೌಲ್ಯದ ಕಡಲೆ ಬೆಳೆಯನ್ನು ಇನ್ನೆರೆಡು ದಿನದಲ್ಲಿ ರಾಶಿ ಮಾಡಲು ಆರಂಭಿಸಬೇಕಿತ್ತು.

ಪೂರ್ವಭಾವಿಯಾಗಿ ಶನಿವಾರ ಮುಂಜಾನೆ ಜಮೀನಿಗೆ ಹೋದಾಗ ಕಡಲೆ ಗೂಡು ಕಳುವು ಆಗಿರುವುದು ರೈತ ಭರಮಗೌಡ ಸಿದ್ದರಾಮನಗೌಡ ಉಮಚಗಿ ಗಮನಕ್ಕೆ ಬಂದಿದೆ. ಈ ಕುರಿತು ಗದಗ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

### ಇಂದು ಜರುಗಲಿರುವ ಇಟಗಿ ಮಹಾದೇವ ದೇವಾಲಯ ರಥೋತ್ಸವದ ನಿಮಿತ್ತ ಲೇಖನ

# ‘ದೇವಾಲಯಗಳ ಚಕ್ರವರ್ತಿ’ ಮಹಾದೇವ ದೇವಾಲಯ



ಸಮುದ್ರದಿಂದ ಆವೃತವಾದ ಈ ಭೂಮಿಯಲ್ಲಿ ಕಾಲಿಡಲು ಇಂತಹ ಅದ್ಭುತ ಕಲಾಕೃತಿ ನೋಡಲು ಸಿಗುವುದಿಲ್ಲ. ಹೋಲಿಕೆಗೆ ಸಾಟಿ ಇರದ ಒಂದೇ ಒಂದು ದೇವಾಲಯ, ದೇವಶಿಲ್ಪ ವಿಶ್ವಕರ್ಮನಿಗೂ ಮಾದರಿಯಾದ ದೇವಾಲಯ, ಶ್ರೀ ಮಹಾದೇವ ದೇವಾಲಯ, ದೇವಾಲಯ ಚಕ್ರವರ್ತಿ ಎಂದು ಶಾಸನದ ಕವಿ ಉತ್ಪ್ರೇಕ್ಷೆಯಿಂದ ಹೊಗಳಿದ್ದಾನೆ.

1112ರಲ್ಲಿ ಸ್ಥಾಪಿತವಾದ ಇಟ್ಟಿಗೆಯ (ಇಟಗಿಯ) ಮಹಾದೇವ ದೇವಾಲಯ ನಮ್ಮ ನಾಡಿನ ಹೆಮ್ಮೆಯ ಕಲಾಕೃತಿ. ಕಲ್ಯಾಣ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ಮಹಾದಂಡನಾಯಕನಾದ ಮಹಾದೇವ ದಂಡ ನಾಯಕ ಈ ದೇವಾಲಯ ನಿರ್ಮಾತಾ. ಕಲ್ಯಾಣ ಚಾಲುಕ್ಯರ ಕಾಲವನ್ನು ವಾಸ್ತುಶಿಲ್ಪ ಶಾಸ್ತ್ರದ ಪ್ರಯೋಗಶಾಲೆ ಎನ್ನುತ್ತಾರೆ. ಕಲ್ಯಾಣ ಚಾಲುಕ್ಯರ ಕಾಲದ ಸ್ಥಪತಿಗಳು (ಶಿಲ್ಪಕಾರರು) ತುಂಬಾ ಪ್ರಬುದ್ಧ ಮತ್ತು ಪ್ರವೀಣರಾಗಿದ್ದರು. ಅವರೇ ಪ್ರಚುರಪಡಿಸಿದ ಶಿಲ್ಪ ಶಾಸ್ತ್ರದ ಶೈಲಿಗೆ ‘ವೇಸರ’ ಶೈಲಿ ಎಂದು ಕರೆಯುತ್ತಾರೆ.

ಉತ್ತರ ಭಾರತದ ನಾಗರ ಶೈಲಿ ಮತ್ತು ದಕ್ಷಿಣ ಭಾರತದ ದ್ರಾವಿಡ ಶೈಲಿಯ ಮಿಳಿತ ರೂಪವೇ ‘ವೇಸರ ಶೈಲಿ’. ಇಲ್ಲಿ ಸೂಕ್ಷ್ಮಾತಿಸೂಕ್ಷ್ಮ ಕೆತ್ತನೆಗೆ ತುಂಬಾ ಮಹತ್ವವಿದೆ. ಈ ದೇವಾಲಯದ ಗರ್ಭಾಲಯದ ಕುಸುರಿ ಕೆಲಸ ಪ್ರಾರಂಭವಾಗುತ್ತದೆ. ಸುಕನಾಸಿ ದ್ವಾರ ಪಟ್ಟಿಕೆ, ಕಂಬಪಟ್ಟಿಕೆ, ಲತಾಸುರುಳಿ ಪಟ್ಟಿಕೆ, ಪೂರಕ ಪಟ್ಟಿಕೆ, ಮೇಲಿರುವ ಅತ್ಯಂತ ಸುಂದರ ಸೂಕ್ಷ್ಮ ಕೆತ್ತನೆ ಶಿಲ್ಪಿಯ ಕಲಾ ಪ್ರೌಢಿಮೆಗೆ ಮೆರಗು ತರುವಂತಿದೆ.

ಸುಕನಾಸಿಯ ಲಲಾಟ ಬಿಂದುವಿನಲ್ಲಿರುವ ಗಜಲಕ್ಷ್ಮೀ, ಕಂಬಗಳ ನುಣುಪು, ತ್ರಿ–ಡಿ ಚಿತ್ರಗಳು, ಜಾಲಂದ್ರಗಳು, ಮುತ್ತಿನ ಸರವೇ ನಾಚುವಂತಿರುವ ಕಂಬಗಳ ಮೇಲಿನ ಕೆತ್ತನೆ, ನವರಂಗದಲ್ಲಿರುವ ಮಕರ ತೋರಣ, ಅರ್ಧ ಮಂಟಪ (ಮುಖಮಂಟಪ) ಈ ಮುಖಮಂಟಪ 56 ಕಂಬಗಳ ಮೇಲೆ ನಿಂತಿತ್ತು. ಈಗ ಉಳಿದಿದ್ದು 26 ಮಾತ್ರ. ಈ 26 ಕಂಬಗಳು ಒಂದನ್ನೊಂದು ಹೋಲಿದಂತಿರುವುದು ತುಂಬಾ ಆಶ್ಚರ್ಯದ ಸಂಗತಿಯಾಗಿದೆ.

ಮುಖಮಂಟಪದಲ್ಲಿರುವ ಅಷ್ಟ ಕೋನಾಕೃತಿಯ ಭುವನೇಶ್ವರಿಯದು ಒಂದು ತೂಕ. ದೇವಾಲಯದ ಗೋಪುರ ಬಿದ್ದು ಹೋದಾಗ ವಿಜಯನಗರದ ದೊರೆ ಕಂಪಣ ಮಹಾರಾಜ ಅದನ್ನು ಮರು ನಿರ್ಮಾಣ ಮಾಡಿದನೆಂದು ತಿಳಿದುಬರುತ್ತದೆ.

ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ಇಟಗಿಯ ಈ ದೇವಾಲಯ ಪರಮ ಪಿತ ಪರಮೇಶ್ವರನಿಗೆ ಅರ್ಪಿತವಾಗಿದ್ದು. ಇದೇ ಜನವರಿ 11ರ ಗುರುವಾರ ಎಳ್ಳು ಅಮಾವಾಸ್ಯೆಯ ದಿವಸ ದೇವಾಲಯಗಳ ಚಕ್ರವರ್ತಿಯ ದೇವಾಲಯದಲ್ಲಿ ನೆಲೆಸಿರುವ ಶ್ರೀ ಮಹಾದೇವನ ಮಹಾ ಜಾತ್ರೆ, ಪಂಚ ಕಳಸ ಮಹಾ ರಥೋತ್ಸವ ಜರುಗಲಿದೆ. ಈ ಸಂದರ್ಭದಲ್ಲಿ ಇಟಗಿ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಹಳ್ಳಿಯ ಜನ ಮತ್ತು ನಾಡಿನ ವಿವಿಧ ಭಾಗಗಳಿಂದ ಬರುವ ಭಕ್ತಾದಿಗಳು ಮಹಾದೇವನ ರಥೋತ್ಸವದಲ್ಲಿ ಪಾಲ್ಗೊಂಡು ಕೃತಾರ್ಥರಾಗುತ್ತಾರೆ. ಶ್ರೀ ಮಹಾದೇವ ದೇವಾಲಯದ ಅರ್ಚಕ ಕುಟುಂಬದವರು ಬಂದ ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡುತ್ತಾರೆ. ಮಹಾದೇವನ ದರ್ಶನ ಪಡೆದು ತಮ್ಮ ಹರಕೆಗಳನ್ನು ಈಡೇರಿಸಿ ಪ್ರಸಾದ ಸ್ವೀಕರಿಸಿ ಶ್ರೀ ಮಹಾದೇವ ಸ್ವಾಮಿಯ ಕೃಪೆಗೆ ಪಾತ್ರರಾಗುತ್ತಾರೆ.

‘ಬ್ರಹ್ಮನು ನಿರ್ಮಿಸಲರಿಯ ನಿಧನ್’ ಬ್ರಹ್ಮನಿಂದಲೂ ನಿರ್ಮಿಸಲು ಅಸಾಧ್ಯವಾದಂತಹ ಅದ್ಭುತ ಕಲಾಕೃತಿ ನಮ್ಮ ಕೊಪ್ಪಳ ಜಿಲ್ಲೆಯಲ್ಲಿರುವುದು ನಮ್ಮ ಭಾಗ್ಯ. ಇಂತಹ ಕಲಾಕೃತಿಯ ಮಧ್ಯೆ ನೆಲೆಸಿರುವ ಮಹಾದೇವನ ಪಂಚ ಕಳಸ ಮಹಾ ರಥೋತ್ಸವಕ್ಕೆ ಎಲ್ಲರೂ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗುವುದರೊಂದಿಗೆ ಬೆರಗುಗೊಳಿಸುವ ಕಲಾಕೃತಿಯನ್ನು ಕಣ್ತುಂಬಿಕೊಂಡು, ಕಲೆಯನ್ನು ಉಳಿಸಿ ಬೆಳೆಸಿಕೊಂಡು ಹೋಗೋಣ.

**– ಶ್ರೀಕಾಂತ ದ.ಪೂಜಾರ.**
ಅರ್ಚಕರು, ಶ್ರೀ ಮಹಾದೇವ ದೇವಾಲಯ–ಶ್ರೀಕ್ಷೇತ್ರ ಇಟಗಿ.

### ಉತ್ತರ ಕರ್ನಾಟಕದಾದ್ಯಂತ ‘ಎಳ್ಳ ಅಮಾವಾಸ್ಯೆ’ ಹಬ್ಬದ ಸಂಭ್ರಮ

# ಗ್ರಾಮೀಣ ಸೊಗಡಿನ ರೈತರ ಹಬ್ಬ

ಉತ್ತರ ಕರ್ನಾಟಕ, ಅದರಲ್ಲೂ ಗದಗ ಜಿಲ್ಲೆ ಗದಗ ತಾಲ್ಲೂಕು ತಿಮ್ಮಾಪೂರ ಗ್ರಾಮ ಅತೀ ಹೆಚ್ಚು ಯರಿ ಭೂಮಿಯನ್ನು ಹೊಂದಿದ್ದು, ಈ ಸಲ ಜ.11ರ ಎಳ್ಳ ಅಮಾವಾಸ್ಯೆಯಂದು ಭೂಮಿಪೂಜೆ ನೆರವೇರಿಸುತ್ತಾರೆ. ಯಾವುದೇ ಜಾತಿ–ಮತಗಳ ಭೇದವಿಲ್ಲದೆ ಆಚರಣೆ ಮಾಡುವ ಅನ್ನದಾತರ ಹಬ್ಬ ಇದಾಗಿದೆ.

ಎಳ್ಳ ಅಮಾವಾಸ್ಯೆಗೆ ಇನ್ನೂ ಐದಾರು ದಿನ ಇರುವಾಗಲೇ ಪುರಷರು ಚಕ್ಕಡಿ, ಎತ್ತುಗಳನ್ನು ಸಿಂಗರಿಸುವ ಹುಮ್ಮಸ್ಸಿನಲ್ಲಿದ್ದರೆ, ಮಹಿಳೆಯರು ಶೇಂಗಾ ಹೋಳಿಗೆ, ಎಳ್ಳು ಹೋಳಿಗೆ, ಎಣ್ಣೆ ಹೋಳಿಗೆ, ಕರಿಗಡಬು, ಕರ್ಚಿಕಾಯಿ ಬಜ್ಜಿ, ಎಳ್ಳು ಹಚ್ಚಿದ ಸಜ್ಜೆ ರೊಟ್ಟಿ,



ಜೋಳದ ರೊಟ್ಟಿ, ಅಗಸಿಪುಡಿ, ಶೇಂಗಾಪುಡಿ, ಪುಟಾಣಿ, ಗುರೆಳ್ಳು ಚಟ್ನಿ ಹಾಗೂ ಕೆಂಪಿಂಡಿ ತಯಾರು ಮಾಡುವ ಸಡಗರ ನೋಡಿದರೆ ಮಕ್ಕಳ ಸಂಭ್ರಮ ಹೇಳತೀರದು.

ಎಳ್ಳು ಅಮಾವಾಸ್ಯೆಯ ದಿನ ಅನ್ನದಾತರ ಆರಾಧ್ಯ ದೇವತೆ ಭೂತಾಯಿಗೆ ಸೀಮಂತ ಕಾರ್ಯ ಮಾಡುವದು ಉತ್ತರ ಕರ್ನಾಟಕದ ರೈತರ ಪದ್ಧತಿಯಾಗಿದ್ದು, ಹಿರಿಯರು ಹಾಕಿಕೊಟ್ಟ ದಾರಿಯಲ್ಲಿ ಈ ಹಬ್ಬವನ್ನು ಅತೀ ಅದ್ದೂರಿಯಾಗಿ ಆಚರಣೆ ಮಾಡುತ್ತ ಬರಲಾಗುತ್ತಿದೆ. ಹೊಲದಲ್ಲಿ ಭೂತಾಯಿ ಹಸಿರು ಸೀರೆಯುಟ್ಟಂತೆ ಕಂಗೊಳಿಸುತ್ತಿರುತ್ತಾಳೆ. ಈ ಸಂದರ್ಭದಲ್ಲಿ ಪ್ರತೀ ರೈತರೂ ತಮ್ಮ ತಮ್ಮ ಹೊಲದಲ್ಲಿರುವ ಬನ್ನಿ ಮಹಾಂಕಾಳಿಗೆ ಪೂಜೆ ಸಲ್ಲಿಸಿ, ಐದು ಕಲ್ಲುಗನ್ನು ಇಟ್ಟು ಅವುಗಳನ್ನು ಪಂಚ ಪಾಂಡವರೆಂದು ಹಾಗೂ ಅದರ ಹಿಂದೆ ಒಂದು ಕಲ್ಲನ್ನು ಇಟ್ಟು ಅದನ್ನು ಮಹಾಕಳ್ಳಾ ಎಂದು ಹೇಳುತ್ತಾ ಅವುಗಳಿಗೆಲ್ಲಾ ವಿಭೂತಿ, ಕುಂಕುಮ, ಭಂಡಾರ ಹಚ್ಚಿ, ಸುಣ್ಣದಿಂದ ಮರಕ್ಕೆ ಐದು ಸುತ್ತು ಗೆರೆ ಬಳಿದು ಪೂಜಿಸಿ



ಎಲ್ಲಾ ತರಹದ ಹೋಳಿಗೆ ರೊಟ್ಟಿ, ಬದನೇಕಾಯಿ ಪಲ್ಲೆ, ಅನ್ನ ನೈವೇದ್ಯ ಹಿಡಿದು ಹೊಲದ ತುಂಬಾ ಚೇರಾಗ ಚೆಲ್ಲುತ್ತಾರೆ.

ನಂತರ ಭೂತಾಯಿಗೆ ನಮಸ್ಕರಿಸಿ, ‘ಇಂದಿನ ವರ್ಷ ಹೇಗಾದರೂ ಆಗಲಿ, ಮುಂದಿನ ವರ್ಷ ಚೊಲೋ ಮಳೆ–ಬೆಳೆ ಬರುವ ಹಾಗೆ ಮಾಡು ತಾಯಿ’ ಎಂದು ಬೇಡಿಕೊಳ್ಳುತ್ತಾರೆ. ಎಲ್ಲರೂ ಸೇರಿ ಖುಷಿಯಿಂದ ಸಾಮೂಹಿಕ ಭೋಜನ ಮಾಡುವದು ಈ ಹಬ್ಬದ ವಿಶೇಷತೆ. ಈ ಸಮಯದಲ್ಲಿ ಹೊಲಕ್ಕೆ ಬಂದವರಿಗೂ ಅಕ್ಕರೆಯಿಂದ ಊಟ ಬಡಿಸುವ ಖುಷಿ ತಾಯಂದಿರದ್ದು. ನಂತರ, ಹಿರಿಯರು ಹಾಗೂ ಮಹಿಳೆಯರು ಹೊಟ್ಟೆ ತುಂಬಾ ಭೋಜನ ಸ್ವೀಕರಿಸಿ, ಎಲೆ–ಅಡಿಕೆ ಹಾಕಿಕೊಂಡು ಬೆಳೆಯಲ್ಲಾ ಅಡ್ಡಾಡಿ ಮರದ ಕೆಳಗೆ ವಿಶ್ರಾಂತಿ ತಗೆದುಕೊಂಡರೆ, ಮಕ್ಕಳು ಮತ್ತು ಯುವಕರು ತಮ್ಮ ಹಾಗೂ ಅವರಿವರ ಹೊಲದಲ್ಲಿ ಬೆಳೆದ ಕಡಲೆ ಕಿತ್ತು ತಿನ್ನುತ್ತಾ ಮಜಾ ಮಾಡುವುದರ ಮೂಲಕ ಹೊಸ ವರ್ಷದ ಮೊದಲ ಹಬ್ಬ ಆಚರಿಸುತ್ತಾರೆ.

> ಈ ದಿವಸ ತಮ್ಮ ತಮ್ಮ ದೂರದ ಸಂಬಂಧಿಕರನ್ನು ಹಾಗೂ ಸ್ನೇಹಿತರನ್ನು ಕರೆಯಿಸಿ, ಪ್ರತಿಯೊಬ್ಬರು ಹೊಸ ಬಟ್ಟೆಯನ್ನುಟ್ಟು ಎತ್ತಿನ ಬಂಡಿ ಹೂಡಿಕೊಂಡು ಅದರಲ್ಲಿ ಎತ್ತುಗಳಿಗೆ ಜುಲಾ ಹಾಕಿ ಕೊರಳಲ್ಲಿ ಗೆಜ್ಜೆಸರ ಕಟ್ಟಿ ಕೊಂಬುಗಳಿಗೆ ಕೋಡಣಸು, ಹಣೆ ಕಟ್ಟು ಹಾಕಿ ಅಲಂಕರಿಸುವುದು ವಿಶೇಷವಾಗಿರುತ್ತದೆ. ಅಷ್ಟೇ ಅಲ್ಲ, ಈ ಆಚರಣೆ ಗ್ರಾಮೀಣ ಸೊಗಡು, ಸಂಭ್ರಮವನ್ನೂ ಬಿಂಬಿಸುತ್ತದೆ.
>
> **– ಯಲ್ಲಪ್ಪ ಎಚ್.ಬಾಬರಿ.**
> ಜಿಲ್ಲಾಧ್ಯಕ್ಷರು,
> ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ.

### ಕೊಲನಪಾಕದಲ್ಲಿ ‘ರಂಭಾಪುರಿ ಬೆಳಗು’ ಮಾಸಪತ್ರಿಕೆ ಬಿಡುಗಡೆ ಮಾಡಿದ ಸಚಿವ ಈಶ್ವರ ಖಂಡ್ರೆ

# ಶ್ರೀ ಸೋಮೇಶ್ವರ ಕ್ಷೇತ್ರ ಅಭಿವೃದ್ಧಿಯಾಗಬೇಕು

**■ ವಿಜಯಸಾಕ್ಷಿ ಸುದ್ದಿ, ಕೊಲನಪಾಕ (ತೆಲಂಗಾಣ)**

ಅತ್ಯಂತ ಪ್ರಾಚೀನವಾದ ವೀರಶೈವ ಧರ್ಮವನ್ನು ಭೂಮಂಡಲದಲ್ಲಿ ಮೊಟ್ಟ ಮೊದಲಿಗೆ ನೆಲೆಗೊಳಿಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರು ಅವತರಿಸಿದ ಸ್ವಯಂಭು ಶ್ರೀ ಸೋಮೇಶ್ವರ ಕ್ಷೇತ್ರ ಅಭಿವೃದ್ಧಿಯಾಗಬೇಕೆಂಬ ಸಂಕಲ್ಪ ನಮ್ಮೆಲ್ಲರದಾಗಲೆಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಅಭಿಪ್ರಾಯಪಟ್ಟರು.

ಅವರು ಕೊಲನಪಾಕ ಸ್ವಯಂಭು ಶ್ರೀ ಸೋಮೇಶ್ವರ ದೇವಸ್ಥಾನದ ಆವರಣದಲ್ಲಿ ಜರುಗಿದ ಇಷ್ಟಲಿಂಗ ಮಹಾಪೂಜಾ ಧರ್ಮ ಸಮಾರಂಭದಲ್ಲಿ ‘ರಂಭಾಪುರಿ ಬೆಳಗು’ ಮಾಸಪತ್ರಿಕೆ ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ಈ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ನಡೆಯಬೇಕಿದೆ. ದೇವಸ್ಥಾನದ ಪುನರ್ ನಿರ್ಮಾಣ, ಬರುವ ಭಕ್ತರಿಗೆ ಯಾತ್ರಿ ನಿವಾಸ ಮತ್ತು ಮೂಲಭೂತ ಸೌಕರ್ಯಗಳನ್ನು



ದೊರಕಿಸಿಕೊಡುವ ಅವಶ್ಯಕತೆಯಿದೆ. ಬಾಳೆಹೊನ್ನೂರು ಶ್ರೀ ರಂಭಾಪುರಿ ಜಗದ್ಗುರುಗಳು ಕ್ಷೇತ್ರದ ಅಭಿವೃದ್ಧಿಗಾಗಿ ಸಂಕಲ್ಪ ಮಾಡಿದ್ದಾರೆ. ಅವರಿಗೆ ಎಲ್ಲ ಭಕ್ತರು ಸಹಕರಿಸಬೇಕೆಂದರಲ್ಲದೆ, ಸರ್ಕಾರದಿಂದಲೂ ಅನುದಾನ ಒದಗಿಸುವುದಾಗಿ ತಿಳಿಸಿದರು.

ಶುಭಾಶೀರ್ವಾದ ಸಂದೇಶ ಅನುಗ್ರಹಿಸಿದ ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು, ಸಮಾಜದಲ್ಲಿ ಶಾಂತಿ, ಸಾಮರಸ್ಯ, ಸೌಹಾರ್ದತೆ ಬೆಳೆಸಿದ ಈ ಕ್ಷೇತ್ರ ಗತಕಾಲದ ವೈಭವವನ್ನು ಮತ್ತೆ ಕಾಣುವಂತಾಗಲು ಎಲ್ಲರ ಸಹಕಾರ ಮುಖ್ಯವಾಗಿದೆ ಎಂದರು.

ಮೇಹಕರ ಹಿರೇಮಠದ ರಾಜೇಶ್ವರ ಶ್ರೀಗಳು ಮತ್ತು ಕಲ್ಯಾಣ ಬಳ್ಳಾರಿ ಶ್ರೀಗಳು ಉಪದೇಶಾಮೃತವನ್ನಿತ್ತರು. ಸಿದ್ಧರಬೆಟ್ಟ, ಮಳಲಿಮಠ, ಗುಂಡಕನಾಳ, ದೇವಾಪುರ, ತೊನಸನಹಳ್ಳಿ, ಹರಪನಹಳ್ಳಿ, ಕೂಡ್ಲಿಗಿ ಶ್ರೀಗಳು ಉಪಸ್ಥಿತರಿದ್ದರು. ಯಾದಾದ್ರಿ ಭುವನಗಿರಿ ಜಿಲ್ಲೆಯ ಎ.ಸಿ ವೀರಾರೆಡ್ಡಿ ಪಾಲ್ಗೊಂಡು ಆಶೀರ್ವಾದ ಪಡೆದರು.

ಹೈದರಾಬಾದಿನ ವೀರಶೈವ ಸಮಾಜದ ಅಧ್ಯಕ್ಷ ವೀರಮಲ್ಲೇಶ, ನ್ಯಾಯವಾದಿ ಜಯಕುಮಾರ ಹೇರೂರ, ಶ್ರೀ ಪೀಠದ ಆಡಳಿತಾಧಿಕಾರಿ ಎಸ್.ಬಿ. ಹಿರೇಮಠ, ಶಿವಶರಣಪ್ಪ ಸೀರಿ, ಅಣ್ಣಾರಾವ ಬಿರಾದಾರ, ಗುರುಪಾದಪ್ಪ ಕಿಣಗಿ ಉಪಸ್ಥಿತರಿದ್ದರು.

# ಗದಗ–ಬೆಟಗೇರಿ ಮುನ್ಸಿಪಲ್ ಎಂಪ್ಲಾಯಿಸ್ ಕೋ–ಆಪ್ ಕ್ರೆಡಿಟ್ ಸೊಸೈಟಿಯ ಪದಾಧಿಕಾರಿಗಳ ಆಯ್ಕೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ–ಬೆಟಗೇರಿ ಮುನ್ಸಿಪಲ್ ಎಂಪ್ಲಾಯಿಸ್ ಕೋ–ಆಪ್ ಕ್ರೆಡಿಟ್ ಸೊಸೈಟಿ ನಿ. ಗದಗ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಸಾಮಾನ್ಯ ಮತಕ್ಷೇತ್ರದಿಂದ ಅರವಿಂದ ಬಸಪ್ಪ ಕುರ್ತಕೋಟಿ, ಕೆಂಚಪ್ಪ ಫಕೀರಪ್ಪ ಪೂಜಾರ, ಚಂದ್ರಶೇಖರ ರುದ್ರಪ್ಪ



ಹಾದಿಮನಿ, ನಾಗರಾಜ ಮಾರೆಪ್ಪ ಬಳ್ಳಾರಿ, ಎಂ.ಎಸ್. ದೊಡ್ಡಮನಿ, ವಾಸಪ್ಪ ಎಂ.ಹಾದಿಮನಿ, ಎಸ್.ಎನ್. ಬೊಳಮ್ಮನವರ ಆಯ್ಕೆಯಾದರು.

ಮಹಿಳಾ ಮೀಸಲು ಮತಕ್ಷೇತ್ರದಿಂದ ಬಸವ್ವ ನಿಂಗಬಸಪ್ಪ ಬೇವಿನಮರದ, ವಿಜಯಲಕ್ಷ್ಮೀ ಹುಲಗಪ್ಪ ಬಳ್ಳಾರಿ, ಹಿಂದುಳಿದ ಬ ವರ್ಗದಿಂದ ಸಂಗಪ್ಪ ಕೆ.ವಡ್ಡಿನ, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದ ಹೇಮೇಶ ಹುಲಗಪ್ಪ ಯಟ್ಟಿ ಆಯ್ಕೆಯಾಗಿದ್ದಾರೆ.

ಅವಿರೋಧವಾಗಿ ಜಮುನಾಭಾಯಿ ಕರಿಯಪ್ಪ ಮುಂಡರಗಿ, ದೇವಪ್ಪ ತಿಮ್ಮಣ್ಣ ಉಪ್ಪಾರ ಸೇರಿದಂತೆ ಒಟ್ಟು 13 ಸದಸ್ಯರನ್ನು ಆಯ್ಕೆ ಮಾಡಲಾಯಿತು.

# ಶಾಲೆಯ ಬಿಸಿಯೂಟವನ್ನು ತಪ್ಪದೇ ಸೇವಿಸಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಸರಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಮಧ್ಯಾಹ್ನದ ಬಿಸಿ ಊಟದ ಸದುಪಯೋಗವನ್ನು ಎಲ್ಲಾ ಮಕ್ಕಳು ಪಡೆದುಕೊಳ್ಳಬೇಕು ಎಂದು ಜಿ.ಪಂ ಅಕ್ಷರ ದಾಸೋಹ ಅಧಿಕಾರಿ ಎಸ್.ಡಿ. ಕನವಳ್ಳಿ ಹೇಳಿದರು.

ಅವರು ಪಟ್ಟಣದ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆಗೆ ಭೇಟಿ ನೀಡಿ, ಮಕ್ಕಳೊಂದಿಗೆ ಶಿಕ್ಷಣದ ಕುರಿತು ಚರ್ಚಿಸಿ, ಮಕ್ಕಳೊಂದಿಗೆ ಕುಳಿತು ಮದ್ಯಾಹ್ನದ ಬಿಸಿ ಊಟವನ್ನು ಸವಿದು ಮಾತನಾಡಿ, ಮಕ್ಕಳು ಶಾಲೆಯಲ್ಲಿ ನೀಡುವ ಬಿಸಿ ಊಟವನ್ನು ತಪ್ಪದೇ ಸೇವಿಸಬೇಕು. ಬಿಸಿ ಊಟದಲ್ಲಿ ಪೌಷ್ಟಿಕಾಂಶಯುಕ್ತ ಆಹಾರೊದಗಿಸುತ್ತಿದ್ದು, ಮಕ್ಕಳ ಆರೋಗ್ಯ, ದೈಹಿಕ ಸಾಮರ್ಥ್ಯ, ಜೊತೆಯಲ್ಲಿ ಬೌದ್ಧಿಕ ಮಟ್ಟ ಸುಧಾರಣೆಯಾಗುತ್ತದೆ ಎಂದರು.

ಶಾಲಾ ಪ್ರಧಾನ ಗುರು ಪಿ.ಬಿ. ಕೆಂಚನಗೌಡರ, ಎಂ.ಎಂ. ಮೆಗಲಮನಿ, ಎಂ.ಎಂ. ಕೊಪ್ಪಳ, ಕೆ.ಎಂ. ಹೆರಕಲ್ಲ, ಎಸ್.ಎಚ್. ಉಪ್ಪಾರ, ಎಚ್.ಆರ್. ಭಜೆಂತ್ರಿ, ವಿ.ಎಂ. ಕಂಠಿ, ಎಸ್.ವಿ. ಹಿರೇಮಠ, ಎಸ್.ಡಿ. ಪಂಡಿತ, ಜ್ಯೋತಿ ಜಾಧವ, ನಂದಾ ಮಟ್ಟಿ, ಶಭಾನಾ ಡಾಲಾಯತ, ಪವಿತ್ರಾ ಮಟ್ಟಿ, ಅಡುಗೆ ಸಹಾಯಕಿ ರೇಣುಕಾ ಬಗಾಡೆ, ಲಕ್ಷ್ಮೀ ಬೆದರೆ, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ವಿ.ಡಿ. ಸಿದ್ದನಗೌಡರ ಹಾಗೂ ಮಕ್ಕಳು ಇದ್ದರು.

# ನರ್ಸರಿ ನಿರ್ವಹಣೆ ತಂತ್ರಜ್ಞಾನದ ಕುರಿತು ತರಬೇತಿ



■ವಿಜಯಸಾಕ್ಷಿ ಸುದ್ದಿ, ಗದಗ.

ಕರ್ನಾಟಕ ನೀರಾವರಿ ನಿಗಮ ನಿಯಮಿತ ಸಿಂಗಟಾಲೂರು ಏತ ನೀರಾವರಿ ಯೋಜನೆಯ ಎಮ್‌ಇಐಎಲ್ ಮತ್ತು ನೆಟಾಫಿಮ್ ಸಹಯೋಗದಲ್ಲಿ ಹನಿ ನೀರಾವರಿ ಯೋಜನೆ-1, 3 ಮತ್ತು 4ರ ಫಲಾನುಭವಿ ರೈತರಿಗೆ ನರ್ಸರಿ ನಿರ್ವಹಣೆ ತಂತ್ರಜ್ಞಾನದ ಕುರಿತು ಗದುಗಿನ ಕೃಷಿ ವಿಸ್ತರಣಾ ಕೇಂದ್ರದಲ್ಲಿ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕೃಷಿ ವಿಜ್ಞಾನ ಕೇಂದ್ರದ ನಿವೃತ್ತ ವಿಜ್ಞಾನಿ ಎಸ್.ಕೆ. ಮುದ್ಲಾಪುರ್ ಮತ್ತು ಅಗ್ರಿಪ್ಲಾಸ್ಟ್ ಟೆಕ್‌ನ ಸಂಪನ್ಮೂಲ ವ್ಯಕ್ತಿಗಳು ಫಲಾನುಭವಿ ರೈತರಿಗೆ ಕಡಿಮೆ ನೀರಿನಲ್ಲಿ, ಕಡಿಮೆ ಖರ್ಚಿನಲ್ಲಿ ತಂತ್ರಜ್ಞಾನಗಳನ್ನು ಉಪಯೋಗಿಸಿಕೊಂಡು ಹೆಚ್ಚು ಇಳುವರಿ ಹೇಗೆ ಪಡೆಯಬಹುದು ಎಂದು ತಿಳಿಸಿಕೊಟ್ಟರು. ಅಗ್ರಿಪ್ಲಾಸ್ಟ್ ಟೆಕ್ ಸಿಬ್ಬಂದಿ ಶಬ್ಬೀರ್ ಮತ್ತು ಅರುಣ ತಮ್ಮ ಕಂಪನಿಯ ಉಪಯುಕ್ತ ತಂತ್ರಜ್ಞಾನದ ಬಗ್ಗೆ ಪರಿಚಯಿಸಿಕೊಟ್ಟರು. ಹಸಿರುಮನೆ ವಿಧಾನ ಮತ್ತು ಪ್ರಾಮುಖ್ಯತೆ, ನರ್ಸರಿ ನಿರ್ವಹಣೆ, ಪ್ಲಾಸ್ಟಿಕ್ ಹೊದಿಕೆ, ಕಳೆ ನಿಯಂತ್ರಣದ ಹೊದಿಕೆ ಮತ್ತು ನೆರಳು ಘಟಕದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿಸಿಕೊಟ್ಟರು.

ನೆಟಾಫಿಮ್ ಕಂಪನಿಯ ಸಹಾಯಕ ಮುಖ್ಯ ವ್ಯವಸ್ಥಾಪಕ ಗಿರೀಶ ದೇಶಪಾಂಡೆ, ವಿನ್ಯಾಸ ವ್ಯವಸ್ಥಾಪಕ ಸತೀಶ ಕದಮ, ಯೋಜನಾ ವ್ಯವಸ್ಥಾಪಕರಾದ ಲಕ್ಷ್ಮೀಕಾಂತ ಕುಮಾವತ್, ರವಿರಾಜಗೌಡ ಪಾಟೀಲ್, ಪ್ರಮೋದ ನಾಯ್ಕರ್, ಕೃಷಿ ಬೇಸಾಯ ತಜ್ಞರಾದ ಆನಂದ ಆಲೂರ, ಸುರೇಶ ರೇವಣಕಿ, ಯುವರಾಜ ಭಜಂತ್ರಿ, ಕವಿರಾಜ್, ಅನಂತಕುಮಾರ, ವಿಜೇತ, ವಿಜಯ ಮುಂತಾದವರಿದ್ದರು.

# ನಾಳೆ ಅಂತೂರ-ಬೆಂತೂರಿನಲ್ಲಿ 'ಯುವ ಸೌರಭ-2024'

■ವಿಜಯಸಾಕ್ಷಿ ಸುದ್ದಿ, ಗದಗ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕರ್ನಾಟಕ ಸಂಭ್ರಮ-50 ರ ಅಂಗವಾಗಿ ಯುವ ಸೌರಭ ಕಾರ್ಯಕ್ರಮವನ್ನು ಜನವರಿ 12 ರಂದು ಸಂಜೆ 6 ಗಂಟೆಗೆ ಗದಗ ತಾಲೂಕಿನ ಅಂತೂರ ಬೆಂತೂರ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಅಂತೂರ ಬೆಂತೂರ ಗ್ರಾಮ ಪಂಚಾಯತ್ ಅಧ್ಯಕ್ಷ ಪ್ರಕಾಶಗೌಡ ಪಾಟೀಲ, ಉಪಾಧ್ಯಕ್ಷರಾದ ಶ್ರೀಮತಿ ಪಾರವ್ವ ಯಡಿಕುಂಟಿ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ಕೆ.ಎಚ್. ಚನ್ನೂರ ಆಗಮಿಸುವರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ವೀರಯ್ಯ ಸ್ವಾಮಿ ಬಿ ಸ್ವಾಗತ ಕೋರಿದ್ದಾರೆ.

### ಐಟಿಐ ಕಾಲೇಜು ಕಟ್ಟಡ ಲೋಕಾರ್ಪಣೆಗೊಳಿಸಿದ ಶಾಸಕ ಸಿ.ಸಿ. ಪಾಟೀಲ

# ಮೂಲ ಸೌಕರ್ಯ ಅಭಿವೃದ್ಧಿಗೆ ಅಗತ್ಯ ಅನುದಾನ

■ವಿಜಯಸಾಕ್ಷಿ ಸುದ್ದಿ, ಗದಗ

ಹೊಂಬಳದಲ್ಲಿ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಟ್ಟಡ ನಿರ್ಮಿಸಲು ಭೂದಾನ ಮಾಡಿದ ಮೈಲಾರ ಕುಟುಂಬಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಶಾಸಕ ಸಿ.ಸಿ. ಪಾಟೀಲ ನುಡಿದರು.

ಸರಕಾರಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಶ್ರೀಮತಿ ಪಾರ್ವತಮ್ಮ ಮತ್ತು ಶಂಕರಪ್ಪ ಮೈಲಾರ ಸ್ಮಾರಕ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಹೊಂಬಳದಲ್ಲಿ ನಿರ್ಮಿಸಲಾದ ಐಟಿಐ ಕಾಲೇಜು ಕಟ್ಟಡವನ್ನು ಬುಧವಾರ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ತರಬೇತಿ ಸಂಸ್ಥೆ ಹಲವಾರು ವರ್ಷಗಳಿಂದ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿತ್ತು. ಇದನ್ನರಿತ ಮೈಲಾರ ಕುಟುಂಬಸ್ಥರು ಎರಡು ಎಕರೆ ತಮ್ಮ ಸ್ವಂತ ಜಮೀನನ್ನು ಕಾಲೇಜು ನಿರ್ಮಾಣಕ್ಕೆ ಭೂದಾನ ಮಾಡುವ ಮೂಲಕ ಈ ಭಾಗದ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಕಾರ ನೀಡಿದ್ದಾರೆ. ಅವರಿಗೆ ಭಗವಂತ ಇನ್ನೂ ಹೆಚ್ಚಿನ ಆರ್ಥಿಕ ಶಕ್ತಿ ದಯಪಾಲಿಸಲಿ ಎಂದು ಹೇಳಿದರು.



ವಿ.ಪ ಸದಸ್ಯ ಎಸ್.ವಿ. ಸಂಕನೂರ ಮಾತನಾಡಿ, ಧಾರವಾಡದಲ್ಲಿ ಐಟಿಐ ಕೇಂದ್ರವನ್ನು ಇತೀಚೆಗೆ ಪ್ರಧಾನಿ ನರೇಂದ್ರ ಮೋದಿಯವರು ಉದ್ಘಾಟಿಸಿದರು. ಹಾಗೂ ಹುಬ್ಬಳ್ಳಿ-ಧಾರವಾಡ ನಡುವೆ ತ್ರಿಬಲ್ ಐ.ಟಿ. ಕೇಂದ್ರಕ್ಕೆ ರಾಷ್ಟ್ರಪತಿಗಳು ಚಾಲನೆ ನೀಡಿದ್ದಾರೆ. ದೇಶದ ಯುವಕರಿಗೆ ಕೌಶಲ್ಯ ವೃದ್ಧಿಸುವ ಉದ್ದೇಶದಿಂದ 2019ರಲ್ಲಿ ಕೌಶಲಾಭಿವೃದ್ಧಿ ಇಲಾಖೆ ಪ್ರಾರಂಭಿಸುವ ಮೂಲಕ ಯುವಜನರ ಕೌಶಲ್ಯ ವೃದ್ಧಿಗೆ ಮುಂದಾಗಿದ್ದಾರೆ ಎಂದು ಹೇಳಿದರು.

ಲೋಕೋಪಯೋಗಿ ಸಚಿವನಾಗಿದ್ದ ಸಮಯದಲ್ಲಿ ಈ ಕಾಲೇಜು ಕಟ್ಟಡ ನಿರ್ಮಾಣಕ್ಕೆ 2.19 ಕೋಟಿ ರೂ. ಅನುದಾನ ಒದಗಿಸುವ ಮೂಲಕ ಸುಂದರ ಕಟ್ಟಡ ನಿರ್ಮಾಣಕ್ಕೆ 2019ರಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ಇಂದು ಉದ್ಘಾಟನೆ ಆಗಿರುವದು ಸಂತಸ ತಂದಿದೆ. ಈ ತರಬೇತಿ ಸಂಸ್ಥೆಯಲ್ಲಿ ಶಿಕ್ಷಣ ಪಡೆದು ತಮ್ಮ ಜೀವನವನ್ನು ಉತ್ತಮವಾಗಿಸಿಕೊಳ್ಳಬೇಕು. ಕಾಲೇಜು ಪ್ರಾಚಾರ್ಯರು ಕೆಲವು ಬೇಡಿಕೆಗಳನ್ನು ಇಟ್ಟಿದ್ದು, ಇನ್ನೆರೆಡು ಹೊಸ ಕೋರ್ಸ್‌ಗಳನ್ನು ಆರಂಭಿಸಲು ನಾನು ಮತ್ತು ವಿ.ಪ ಸದಸ್ಯ ಎಸ್.ವಿ. ಸಂಕನೂರ ಸೇರಿ ಪ್ರಯತ್ನಿಸುವುದಾಗಿ ತಿಳಿಸಿದರು.

ಕಾಲೇಜಿನ ಮೂಲ ಸೌಕರ್ಯ ಅಭಿವೃದ್ಧಿಗೆ ಸರ್ಕಾರದಿಂದ ಅಗತ್ಯ ಅನುದಾನ ಕೊಡಿಸುತ್ತೇವೆ. ಆದರೆ ಕಾಲೇಜಿನಲ್ಲಿ ಕಲಿತ ವಿದ್ಯಾರ್ಥಿಗಳು ಉತ್ತಮ ಉದ್ಯೋಗ ಪಡೆಯುವ ಅಥವಾ ಉದ್ಯಮ ಆರಂಭಿಸುವ ಮೂಲಕ ಈ ಕಾಲೇಜಿಗೆ ಹೆಸರು ತರಬೇಕೆಂದು ಹೇಳಿದರು.

ವಿ.ಪ ಸದಸ್ಯ ಎಸ್.ವಿ. ಸಂಕನೂರ ಮಾತನಾಡಿ, ವಿಜ್ಞಾನ ಮತ್ತು ತಂತ್ರಜ್ಞಾನ ದೇಶದ ಪ್ರಗತಿಯಲ್ಲಿ ತಮ್ಮದೇ ಆದ ಪ್ರಮುಖ ಸ್ಥಾನವನ್ನು ಹೊಂದಿದೆ. ಈ ಕಾರಣಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿಯವರು ದೇಶದಲ್ಲಿದ್ದ ಐಟಿಐ ಕಾಲೇಜುಗಳ ಸಂಖ್ಯೆಯನ್ನು 16ರಿಂದ 23ಕ್ಕೆ ವಿಸ್ತರಿಸಿದ್ದಾರೆ. ಹಾಗೂ ತ್ರಿಬಲ್ ಐ.ಟಿ. 9ರಿಂದ 25ಕ್ಕೆ ಹೆಚ್ಚಿಸುವ ಮೂಲಕ ವಿಜ್ಞಾನ-ತಂತ್ರಜ್ಞಾನಕ್ಕೆ ಒತ್ತು ನೀಡಿದ್ದಾರೆ ಎಂದರು.

ಭೂದಾನಿಗಳಾದ ಶೇಖರಪ್ಪ ಶಿವಪ್ಪ ಮೈಲಾರ ಕುಟುಂಬದವರನ್ನು ಶಾಸಕ ಸಿ.ಸಿ. ಪಾಟೀಲ ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಗ್ರಾ.ಪಂ ಅಧ್ಯಕ್ಷೆ ಭೀಮಾಂಬಿಕಾ ಹಾಲನವರ, ಉಪಾಧ್ಯಕ್ಷೆ ನೀಲಮ್ಮ ಬಾಲಮ್ಮನವರ, ಗಣ್ಯರಾದ ಯಲ್ಲಪ್ಪ ಮೈಲಾರ, ವಸಂತಪ್ಪ ಗಣಾಚ, ಮಲ್ಲಪ್ಪ ಹುಣಸಿಕಟ್ಟಿ, ಅಂದಾನಪ್ಪ ಯಕ್ಲಾಸಪುರ, ರಾಜಣ್ಣ, ನಿಂಗಪ್ಪ ಮಣ್ಣೂರ, ಸರಕಾರಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಜಂಟಿ ನಿರ್ದೇಶಕ ಬಸವಪ್ರಭು ಸೇರಿದಂತೆ ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿ, ಕಾಲೇಜು ವಿದ್ಯಾರ್ಥಿಗಳು ಹಾಜರಿದ್ದರು. ಪ್ರಾಚಾರ್ಯ ಮಲ್ಲೂರ ಬಸವರಾಜ ಪ್ರಾಸ್ತಾವಿಕವಾಗಿ ಮಾತನಾಡಿದರು.

# ರಾಮ ಮಂದಿರ ನಿರ್ಮಾಣ ಒಬ್ಬರ ಕನಸಲ್ಲ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಭಾರತೀಯರ ಹೆಮ್ಮೆಯ ಸಂಕೇತವಾಗಿರುವ ರಾಮ ಮಂದಿರ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಪ್ರಭು ಶ್ರೀರಾಮನ ಮಂದಿರ ಲೋಕಾರ್ಪಣೆಯನ್ನು ಕಣ್ತುಂಬಿಕೊಳ್ಳುತ್ತಿರುವ ನಾವೇ ಭಾಗ್ಯವಂತರು ಎಂದು ಸ್ಥಳೀಯ ಅಕ್ಕನ ಬಳಗದ ಅಧ್ಯಕ್ಷೆ ಸಂಯುಕ್ತಾ ಬಂಡಿ ಹೇಳಿದರು.



ಅಯೋಧ್ಯೆಯ ರಾಮ ಮಂದಿರದಲ್ಲಿ ರಾಮಲಲ್ಲಾ ಮೂರ್ತಿ ಪ್ರಾಣ ಪ್ರತಿಷ್ಠಾಪನೆಗೆ ಪೂರ್ವಭಾವಿಯಾಗಿ ಬುಧವಾರ ಪಟ್ಟಣದ 15ನೇ ವಾರ್ಡಿನಲ್ಲಿ ಮನೆ ಮನೆಗೆ ತೆರಳಿ ಪವಿತ್ರ ಮಂತ್ರಾಕ್ಷತೆ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಮ ಮಂದಿರ ನಿರ್ಮಾಣ ಎನ್ನುವುದು ಒಬ್ಬರ ಅಥವಾ ಲಕ್ಷ ಜನರ ಕನಸಾಗಿರಲಿಲ್ಲ. ಇದು ಅಖಂಡ ಭಾರತದ ಕನಸು ಕಂಡ ಪ್ರತಿ ಭಾರತೀಯನ ಕನಸಾಗಿತ್ತು. ಇಂತಹ ಕನಸನ್ನು ಸಾಕಾರಗೊಳಿಸಲು ಅನೇಕ ಕರಸೇವಕರು ತಮ್ಮ ಪ್ರಾಣವನ್ನು ಅರ್ಪಣೆ ಮಾಡಿದ್ದಾರೆ.

ಕೆಲವೇ ದಿನಗಳಲ್ಲಿ ರಾಮ ಮಂದಿರ ಲೋಕಾರ್ಪಣೆಗೊಳ್ಳುತ್ತಿದ್ದು, ಇಂತಹ ಸೌಭಾಗ್ಯದ ದಿನವನ್ನು ತರಲು ಶ್ರಮಿಸಿದ ಪ್ರಧಾನಿ ಮೋದಿ, ಸಿಎಂ ಯೋಗಿ ಆದಿತ್ಯನಾಥ ಅವರಿಗೆ ರಾಮನ ಮೇಲಿರುವ ಗೌರವ ಹಾಗೂ ಭಕ್ತಿಯಿಂದಾಗಿ ರಾಮ ಮಂದಿರ ಉದ್ಘಾಟನೆಯಾಗುತ್ತಿದೆ. ಅಂದು ನಾವು ಅಯೋಧ್ಯೆಗೆ ಹೋಗಲು ಸಾಧ್ಯವಾಗದಿದ್ದರೂ ನಾವಿರುವ ಜಾಗದಲ್ಲೇ ರಾಮನನ್ನು ಪೂಜಿಸಿ, ದೀಪ ಹಚ್ಚುವ ಮೂಲಕ ಹಬ್ಬದಂತೆ ಆಚರಿಸೋಣ ಎಂದರು.

ಪುರಸಭೆ ಮಾಜಿ ಅಧ್ಯಕ್ಷೆ ಸುಜಾತಾ ಚುಂಚಾ, ಸದಸ್ಯೆ ಲೀಲಾ ಸವಣೂರ ಹಾಗೂ ಮುಖಂಡ ಉಮೇಶ ಚನ್ನುಪಾಟೀಲ ಮಾತನಾಡಿ, ಅಕ್ಷತೆ ಆಹ್ವಾನ ಮಹಾ ಅಭಿಯಾನವು ಈಗಾಗಲೇ ಚಾಲನೆಯಾಗಿದ್ದು ಜ.15ರವರೆಗೆ ನಡೆಯುತ್ತಿದೆ. ರಾಮನ ಭಕ್ತರಾದ ನಾವು ಮನೆ ಮನೆಗೆ ಹೋಗಿ ಅಕ್ಷತೆ, ಆಹ್ವಾನದೊಂದಿಗೆ ಮಾಹಿತಿಯ ಕರಪತ್ರ ವಿತರಿಸುತ್ತಿದ್ದೇವೆ ಎಂದರು.

ಈ ಸಂದರ್ಭದಲ್ಲಿ 15ನೇ ವಾರ್ಡಿನ ಬಿಜೆಪಿ ಮುಖಂಡರು ಹಾಗೂ ಬಡಾವಣೆಯ ನಿವಾಸಿಗಳಿದ್ದರು.

# ಜಿಲ್ಲಾ ಮಟ್ಟದ ಪ್ರಾಚ್ಯಪ್ರಜ್ಞೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಶಾಲಾ ಶಿಕ್ಷಣ ಇಲಾಖೆಯಿಂದ ಮಂಗಳವಾರ ಗದುಗಿನಲ್ಲಿ ನಡೆದ ಜಿಲ್ಲಾ ಮಟ್ಟದ ಪ್ರಾಚ್ಯಪ್ರಜ್ಞೆ ಸ್ಪರ್ಧೆಯಲ್ಲಿ ಲಕ್ಷ್ಮೇಶ್ವರದ ದಿ ಯೂನಿಕ್ ಪ್ರೌಢಶಾಲೆಯ ವಿದ್ಯಾರ್ಥಿನಿ ರಕ್ಷಿತಾ ಸಂಗನಪೇಟೆ ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ಪ್ರಾಚಾರ್ಯ ಅರವಿಂದ ದೇಶಪಾಡೆ, ಶಿಕ್ಷಕರು ವಿದ್ಯಾರ್ಥಿನಿಯನ್ನು ಅಭಿನಂದಿಸಿದ್ದಾರೆ.

# ಜ.13ರಿಂದ ಅನ್ನದಾನೇಶ್ವರ ಶ್ರೀಗಳ ಜಾತ್ರೆ

▶▶ಮೊದಲನೇ ಪುಟದಿಂದ

'ಅಕ್ಷರ' ಕಟ್ಟಡದ ಶಂಕುಸ್ಥಾಪನೆಯನ್ನು ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಸಚಿವ ಬಿ.ನಾಗೇಂದ್ರ ನೆರವೇರಿಸಲಿದ್ದಾರೆ. ರೋಣ ಶಾಸಕ ಜಿ.ಎಸ್. ಪಾಟೀಲ, ಮಾಜಿ ಶಾಸಕ ಡಿ.ಆರ್. ಪಾಟೀಲ, ವಿ.ಪ ಸದಸ್ಯ ಎಸ್.ವಿ. ಸಂಕನೂರ, ಮಾಜಿ ಶಾಸಕ ಕಳಕಪ್ಪ ಬಂಡಿ, ರಾಜ್ಯಸಭೆ ಮಾಜಿ ಸದಸ್ಯ ಬಸವರಾಜ ಪಾಟೀಲ, ಮಾಜಿ ಶಾಸಕ ವೀರಣ್ಣ ಚರಂತಿಮಠ ಇತರರು ಆಗಮಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಶ್ರೀಧರ ಗುಡ್ಡೆ ಮರಿಕೊಟ್ಟೂರು ದೇಶಿಕರು, ಬೂದಗುಂಪ ಸಿದ್ದೇಶ್ವರ ದೇಶಿಕರು, ಅಡ್ನೂರು ವಿಶ್ವೇಶ್ವರ ದೇವರು, ಅಂದಾನಗೌಡ ಪಾಟೀಲ, ಎ.ಸಿ. ಪಾಟೀಲ, ರವೀಂದ್ರನಾಥ ದೊಡ್ಡಮೇಟಿ, ಎನ್. ಆರ್. ಗೌಡರ, ಶರಣಪ್ಪ ಜವಳಗೇರಿ ಮುಂತಾದವರು ಉಪಸ್ಥಿತರಿದ್ದರು.

### ಜಿ.ಸಿ.ಟಿ.ಎಂ. ಪ.ಪೂ ಕಾಲೇಜಿನಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ

# ವಿದ್ಯಾರ್ಥಿಗಳು ಸತತ ಅಧ್ಯಯನಶೀಲರಾಗಿ

■ವಿಜಯಸಾಕ್ಷಿ ಸುದ್ದಿ, , ಗದಗ

ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆಯಬೇಕಾಗಿರುವುದು ಆದ್ಯ ಕರ್ತವ್ಯವಾಗಿದೆ. ಉನ್ನತ ಶಿಕ್ಷಣ ಉತ್ತಮ ಉದ್ಯೋಗ, ಉತ್ಕೃಷ್ಟ ಜೀವನ ಎಲ್ಲ ಬಯಕೆಯಾಗಿದೆ. ಅದೇ ರೀತಿ ದೇಶ ರಕ್ಷಣೆ, ದೇಶವಾಸಿಗಳ ಆಹಾರ ಸ್ವಾವಲಂಬನೆ ಹೆಚ್ಚಿಸುವ ಉದ್ಯೋಗ ಮಾಡುವುದು ಕೂಡಾ ಉನ್ನತವಾದ ಕಾರ್ಯ. ಈ ದಿಸೆಯಲ್ಲಿ ಲಾಲಬಹದ್ದೂರ ಶಾಸ್ತ್ರೀಜಿಯವರ ಧ್ಯೇಯವಾಕ್ಯ 'ಜೈ ಜವಾನ ಜೈ ಕಿಸಾನ್' ಮಾತನ್ನು ಅನುಸರಿಸಬೇಕು ಎಂದು ಪ್ರಾಚಾರ್ಯ ಡಾ. ವೈ.ಸಿ. ಪಾಟೀಲ ಹೇಳಿದರು.

ಅವರು ಸ್ಥಳೀಯ ಜಿ.ಸಿ.ಟಿ.ಎಂ. ಪ.ಪೂ ಕಾಲೇಜಿನಲ್ಲಿ ಪ್ರಸ್ತಕ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುವ ಕಾರ್ಯಕ್ರಮ, ವಿದ್ಯಾರ್ಥಿ ಸಂಚಿಕೆ ಬಿಡುಗಡೆ ಹಾಗೂ ಪಾರಿತೋಷಕ ವಿತರಣಾ ಸಮಾರಂಭದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಸತತ ಅಧ್ಯಯನಶೀಲರಾಗಿ, ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಸಿಂಗ್‌ನಂತೆ ದೇಶಸೇವೆ ಮಾಡಬೇಕು. ಧೀರ ಸಿಪಾಯಿಯಾದ ಜಸ್ವಂತ ಇಸ್ರೇಲ್‌ದ ಮಾಜಿ ಪ್ರಧಾನಿ ಗೋಲ್ಡಾ ಮೇರ್‌ನಂತೆ ದೃಢತೆ ಹಾಗೂ ಛಲದ ದೇಶಾಭಿಮಾನಿಯಾಗಿರಬೇಕು. ಈ ಎಲ್ಲ ಉದ್ದೇಶಗಳ ಈಡೇರಿಕೆಗೆ ವಿದ್ಯಾರ್ಥಿಗಳು ನಿಷ್ಠೆ, ಛಲ ಬೆಳೆಸಿಕೊಳ್ಳಬೇಕು. ನಿಸರ್ಗದೊಂದಿಗಿನ ನಮ್ಮ ಜೀವನ ಉತ್ತಮ ಆರೋಗ್ಯ ಹಾಗೂ ಆಯುಷ್ಯವನ್ನು ನೀಡುತ್ತದೆ ಎಂದರು.



ಅತಿಥಿಗಳಾಗಿ ಪಾಲ್ಗೊಂಡಿದ್ದ ಶೈಕ್ಷಣಿಕ ಸಲಹಾ ಸಮಿತಿ ಚೇರಮನ್ ದತ್ತಪ್ಪಗೌಡ ಓದುಗೌಡರ ಮಾತನಾಡುತ್ತಾ, ಪ್ರತೀ ವ್ಯಕ್ತಿ ತಾನು ಯಾರು, ತನ್ನ ಉದ್ದೇಶವೇನು ಹಾಗೂ ಕರ್ತವ್ಯಗಳೇನು ಎಂದು ಅರಿತು ಕಾರ್ಯಪ್ರವೃತ್ತರಾಗಬೇಕು. ಉತ್ತಮ ಹವ್ಯಾಸ, ಸತತ ಅಭ್ಯಾಸ ಹಾಗೂ ನಿರಂತರ ಪರಿಶ್ರಮದಿಂದ ಯಶಸ್ಸು ಸಾಧ್ಯ. ಒಳ್ಳೆಯ ಅಂಕಗಳೊಂದಿಗೆ ಒಳ್ಳೆಯ ಚಾರಿತ್ರ್ಯವನ್ನು ಎಲ್ಲ ವಿದ್ಯಾರ್ಥಿಗಳೂ ಹೊಂದಬೇಕೆಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯ ಎಸ್.ಎ. ದೇಶಪಾಂಡೆ ಮಾತನಾಡಿ, ವಿದ್ಯಾರ್ಥಿಗಳು ಇಷ್ಟಪಟ್ಟು ಅಭ್ಯಾಸಗೈದರೆ ಯಶಸ್ಸು ಖಂಡಿತವಾಗಿಯೂ ಲಭ್ಯವಾಗುತ್ತದೆ. ವಿದ್ಯಾರ್ಥಿಗಳು ಕಲ್ಪನಾಶಕ್ತಿ ಬೆಳೆಸಿಕೊಳ್ಳಬೇಕು. ವಿಜ್ಞಾನ-ತಂತ್ರಜ್ಞಾನದ ಎಲ್ಲ ಬೆಳವಣಿಗೆಗಳು ಕಲ್ಪನೆಯಿಂದ ಕೂಡಿ ವಾಸ್ತವಿಕತೆಯ ರೂಪ ಪಡೆದಿವೆ ಎಂದರು.

ಪ್ರಧಾನ ಕಾರ್ಯದರ್ಶಿ ಮಾಬೂಬಿ ಭದ್ರಾಪೂರ ಸ್ವಾಗತಿಸಿದರು. ಪವಿತ್ರಾ ಹಾಳದೋಟದ ಪರಿಚಯಿಸಿದರು. 2023-24ನೇ ಸಾಲಿನ ಸಾಂಸ್ಕೃತಿಕ ವರದಿಯನ್ನು ಮಹಾಲಕ್ಷ್ಮೀ ಕಮ್ಮಾರ ವಾಚಿಸಿದರು. ಬಹುಮಾನ ವಿತರಣಾ ಕಾರ್ಯಕ್ರಮವನ್ನು ಪೂಜಾ ಪಾಟೀಲ, ಸಂಜನಾ ಹೂಗಾರ ನಡೆಸಿಕೊಟ್ಟರು. ಕ್ರೀಡಾ ವರದಿಯನ್ನು ಪಾರ್ವತಿ ಬಳ್ಳೊಳ್ಳಿ ಓದಿದರು. ವಿದ್ಯಾರ್ಥಿಗಳ ಪರವಾಗಿ ಪಾರ್ವತಿ ಬಳ್ಳೊಳ್ಳಿ, ಮಲ್ಲಿಕಾರ್ಜುನ ಪಲ್ಲೇದ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಸೃಷ್ಟಿ ಉಳ್ಳಾಗಡ್ಡಿ ವಂದಿಸಿದರು. ಶ್ರೀದೇವಿ ಮರಿಗೌಡ್ರ, ಕೀರ್ತಿ ಶೆಟ್ಟರ ಕಾರ್ಯಕ್ರಮ ನಡೆಸಿಕೊಟ್ಟರು.

# ಗಣರಾಜ್ಯೋತ್ಸವ ಅರ್ಥಪೂರ್ಣ ಆಚರಣೆಗೆ ಜಿಲ್ಲಾಧಿಕಾರಿ ಸೂಚನೆ

▶▶ಮೊದಲನೇ ಪುಟದಿಂದ

ಕಾರ್ಯಕ್ರಮದ ಕುರಿತು ಮುದ್ರಿಸಲಾಗುವ ಆಮಂತ್ರಣ ಪತ್ರಿಕೆಗಳನ್ನು ಶಿಷ್ಟಾಚಾರದ ಪ್ರಕಾರ ಮುದ್ರಿಸಿ ಗಣ್ಯರುಗಳಿಗೆ ಸಾಕಷ್ಟು ಸಮಯ ಮುಂಚಿತವಾಗಿ ತಲುಪಿಸಿ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು. ಕಾರ್ಯಕ್ರಮದಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗದಂತೆ ನಿಗಾವಹಿಸಲು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು. ಸಭೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ವ್ಯವಸ್ಥೆ, ಮೂಲಭೂತ ಸೌಕರ್ಯಗಳ ವ್ಯವಸ್ಥೆ, ವೇದಿಕ ನಿರ್ಮಾಣ ಕುರಿತ ಮುಂತಾದ ವಿಷಯಗಳ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಾರುತಿ ಬ್ಯಾಕೋಡ, ಗದಗ ತಹಸೀಲ್ದಾರ ಶ್ರೀನಿವಾಸಮೂರ್ತಿ ಕುಲಕರ್ಣಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಪಿ.ವಾಯ್.ಶೆಟ್ಟೆಪ್ಪನವರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಯುವಜನ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶರಣು ಗೋಗೇರಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಡ್ಡೇರ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯಿಂದ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗಾಗಿ ಅರ್ಹ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಅರ್ಜಿಗಳನ್ನು ಈಗಾಗಲೇ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಜನವರಿ 16 ರವರೆಗೆ ವಿಸ್ತರಿಸಲಾಗಿದೆ. ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಅಥವಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

# ತಂಬಾಕು ನಿಯಂತ್ರಣ ತರಬೇತಿ ಕಾರ್ಯಾಗಾರ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸಮೀಕ್ಷಾ ಘಟಕ, ಲಯನ್ಸ್ ಕ್ಲಬ್, ರೋಟರಿ ಕ್ಲಬ್ ಹಾಗೂ ರೋಟರಿ ಇನ್ನರ್‌ವಿಲ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಇವರ ಸಂಯುಕ್ತಾಶ್ರಯದಲ್ಲಿ ಕರುನಾಡು ಸಭಾಂಗಣ ಜಿಲ್ಲಾ ಸಮೀಕ್ಷಣಾ ಘಟಕದಲ್ಲಿ ತಂಬಾಕು ವ್ಯಸನದಿಂದಾಗುವ ದುಷ್ಪರಿಣಾಮ ಕೋಟ್ಪಾ ಕಾಯ್ದೆ –2003 ತಂಬಾಕು ಮುಕ್ತ ಶಿಕ್ಷಣ ಸಂಸ್ಥೆ ಹಾಗೂ ತಂಬಾಕು ವ್ಯಸನ ಮುಕ್ತ ಕೇಂದ್ರದಲ್ಲಿನ ಸೌಲಭ್ಯಗಳ ಕುರಿತು ಲಾಯನ್ಸ್ ಕ್ಲಬ್, ರೋಟರಿ ಕ್ಲಬ್ ಹಾಗೂ ರೋಟರಿ ಇನ್ನರ್‌ವಿಲ್ ಪದಾಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮವನ್ನು ಬುಧವಾರದಂದು ಹಮ್ಮಿಕೊಳ್ಳಲಾಗಿತ್ತು.

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಗುರುಪ್ರಸಾದ ಅವರು ಕಾರ್ಯಕ್ರಮ ಉದ್ಘಾಟಿಸಿ, ಕೋಟ್ಪಾ ಕಾಯ್ದೆ ಇನ್ನಷ್ಟು ತಿದ್ದುಪಡಿ ಅವಶ್ಯವಿದ್ದು, ದಂಡದ ಮೊತ್ತ ಹೆಚ್ಚಿಸಬೇಕೆಂದು ತಿಳಿಸಿದರು.

ಲಯನ್ಸ್ ಕ್ಲಬ್ ಅಧ್ಯಕ್ಷ ರಮೇಶ ಮಾತನಾಡಿ, ತಂಬಾಕು ನಿಯಂತ್ರಣ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಇನ್ನಿತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕೆಂದರು.

ಜಿಮ್ಸ್ ಪ್ರಾಧ್ಯಾಪಕರಾದ ಡಾ.ಅರವಿಂದ ಕರಿನಾಗಣ್ಣವರ್ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಉಪನ್ಯಾಸ ನೀಡಿದರು. ತರಬೇತಿಯಲ್ಲಿ ತಂಬಾಕಿನಲ್ಲಿರುವ ನಿಕೋಟಿನ್ ಅಂಶ ದೇಹದಲ್ಲಿ ಸೇರಿ ನರಮಂಡಲದ ಕಾರ್ಯದ ಮೇಲೆ ಪರಿಣಾಮ ಬೀರಿ ರಕ್ತ ಹಾಗೂ ಆಕ್ಸಿಜನ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ದೇಹದ ಪ್ರತಿಯೊಂದು ಅಂಗದ ಮೇಲೆ ಪರಿಣಾಮ ಬೀರುತ್ತದೆ ಎಂದು ತಿಳಿಸಿದರು.

ಎನ್.ಟಿ.ಸಿ.ಪಿ. ಜಿಲ್ಲಾ ಸಲಹೆಗಾರರಾದ ಗೋಪಾಲ ಸುರಪುರ, ತಂಬಾಕು ನಿಯಂತ್ರಣ ಕಾಯ್ದೆ ಕೋಟ್ಪಾ–2003 ಕುರಿತು ತಂಬಾಕು ಬಳಕೆ ಹಾಗೂ ಮಾರಾಟ ಕೋಟ್ಪಾ ಕಾಯ್ದೆಯಡಿ ಮಾಡಲು ಸೆಕ್ಷನ್ 4 ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ, ಸೆಕ್ಷನ್5 ತಂಬಾಕು ಉತ್ಪನ್ನಗಳ ನೇರ, ಪರೋಕ್ಷ ಜಾಹಿರಾತು ನಿಷೇಧ, ಸೆಕ್ಷನ್ 6ಎ 18 ವರ್ಷದೊಳಗಿನವರಿಗೆ ನಿಷೇಧ, 6ಬಿ ಶಿಕ್ಷಣ ಸಂಸ್ಥೆಗಳ ಆವರಣದಿಂದ 100 ಗಜದ ವರೆಗೆ ತಂಬಾಕು ನಿಷೇಧ, ಸೆಕ್ಷನ್ 7 ತಂಬಾಕು ಉತ್ಪನ್ನಗಳ ಪ್ಯಾಕ್ ಮೇಲೆ ಆರೋಗ್ಯ ಎಚ್ಚರಿಕೆ ಚಿನ್ಹೆ ಕಡ್ಡಾಯ, ಈ ಕಾಯ್ದೆಗಳ ಅನುಷ್ಠಾನ ಕುರಿತು ಮಾತನಾಡಿದರು. ಶ್ರೀಮತಿ ವರ್ಷಾ ಗುಗ್ಗರಿ ಪ್ರಾರ್ಥಿಸಿದರು. ಎಂ.ಎಸ್. ರಬ್ಬನಗೌಡರ ಕಾರ್ಯಕ್ರಮ ನಿರೂಪಿಸಿದರು. ವಿಠ್ಠಲ್ ನಾಯ್ಕ ಎನ್.ಸಿ.ಡಿ .ಸ್ವಾಗತಿಸಿ ವಂದಿಸಿದರು.

ಕಾರ್ಯಕ್ರಮದಲ್ಲಿ ರೋಟರಿ ಇನ್ನರ್‌ವಿಲ್ ಅಧ್ಯಕ್ಷೆ ರಜನಿ ಪಾಟೀಲ, ಕವಿತಾ ಹೊನ್ನಳ್ಳಿ, ಶಿವಕುಮಾರ ಬಗಾಡೆ, ಮಾರುತಿ, ವೀರಪ್ಪ ಕೋಳಿವಾಡ ಹಾಗೂ ಜಿಲ್ಲಾ ಸಮೀಕ್ಷಾ ಘಟಕದ ಸಿಬ್ಬಂದಿಗಳು ಹಾಜರಿದ್ದರು.

ಅಧ್ಯಕ್ಷತೆ ವಹಿಸಿದ ಜಿಲ್ಲಾ ಸಮೀಕ್ಷಾಣಾಧಿಕಾರಿ ಹಾಗೂ ಕಾರ್ಯಕ್ರಮಾಧಿಕಾರಿ ಡಾ.ವೆಂಕಟೇಶ ರಾಠೋಡ ಮಾತನಾಡಿ ಎನ್.ಟಿ.ಸಿ.ಪಿ ರವರು ತಂಬಾಕು ಸೇವನೆಯಿಂದ ಕ್ಯಾನ್ಸರ್ ನಂತಹ ಭಯಾನಕ ಕಾಯಿಲೆಗಳು, ಅಸಾಂಕ್ರಾಮಿಕ ಕಾಯಿಲೆಗಳು ಹೆಚ್ಚುತ್ತಿದ್ದು, ಕ್ಯಾನ್ಸರ್ ಪ್ರಾರಂಭಿಕ ಹಂತದಲ್ಲಿ ಪತ್ತೆ ಹಚ್ಚಿ ಶೀಘ್ರ ಚಿಕಿತ್ಸೆ ಪಡೆಯಲು ತಿಳಿಸಿದರಲ್ಲದೇ, ಜಿಲ್ಲಾ ವ್ಯಸನ ಮುಕ್ತ ಕೇಂದ್ರದಲ್ಲಿ ಲಭ್ಯವಿರುವ ಸೌಲಭ್ಯಗಳ ಕುರಿತು ವಿವರವಾದ ಮಾಹಿತಿ ನೀಡಿದರು.

## ಜ.27ರಂದು ರಾಜ್ಯ ಮಟ್ಟದ ಸಾಂಸ್ಕೃತಿಕ ಸಮ್ಮೇಳನ

■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಕುಕನೂರಿನ ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್, ಚಿನ್ಮಲಾದ್ರಿ ಸಾಹಿತ್ಯ ವೇದಿಕೆ ಚಿತ್ರದುರ್ಗ ಹಾಗೂ ಜಸ್ಟ್ ಮಾತ್ ಮಾತಲ್ಲಿ ಸ್ನೇಹ ಕೂಟ ಮೈಸೂರು ಸಂಸ್ಥೆಗಳ ಸಹಯೋಗದಲ್ಲಿ ಜ.27ರಂದು ಅಖಿಲ ಕರ್ನಾಟಕ 7ನೇ ಸಾಂಸ್ಕೃತಿಕ ಸಮ್ಮೇಳನ ಜರುಗಲಿದೆ ಎಂದು ಸಮ್ಮೇಳನ ಸಂಚಾಲಕರಾದ ರುದ್ರಪ್ಪ ಭಂಡಾರಿ ಹಾಗೂ ಎಚ್. ಸತೀಶ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಂಸ್ಕೃತಿಕ ಕನ್ನಡ ಹಬ್ಬ, ವಿಚಾರ ಸಂಕಿರಣ, ಚುಟುಕು ಕವಿಗೋಷ್ಠಿ, ಭಕ್ತಿ ಸಂಗೀತ, ಸುಗಮ ಸಂಗೀತ, ದಾಸರ ಪದಗಳು ಕಾರ್ಯಕ್ರಮ, ನೃತ್ಯ, ಭಜನೆ, ಜಾನಪದ ಗಾಯನ ಇತ್ಯಾದಿ ಹಲವು ಪ್ರಕಾರದ ಕಾರ್ಯಕ್ರಮಗಳು ಹಾಗೂ ಸಾಧಕರಿಗೆ ಅಭಿನಂದನಾ ಸಮಾರಂಭಗಳು ನಡೆಯಲಿವೆ.

ಭಾಗವಹಿಸುವ ಆಸಕ್ತರು ಕೂಡಲೇ ತಮ್ಮ ಹೆಸರನ್ನು ಸಂಸ್ಥೆಯ ಅಧ್ಯಕ್ಷ ರುದ್ರಪ್ಪ ಭಂಡಾರಿ (7815985505) ಹಾಗೂ ಚಿನ್ಮಲಾದ್ರಿ ಸಾಹಿತ್ಯ ವೇದಿಕೆಯ ಎಚ್. ಸತೀಶ್ ಕುಮಾರ್ (9980448982) ಇವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಬಸವೇಶ್ವರ ಕಾಲೇಜಿನ ಎನ್‌ಎಸ್‌ಎಸ್ ಶಿಬಿರ



■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಬಸವೇಶ್ವರ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕದ ವಾರ್ಷಿಕ ವಿಶೇಷ ಶಿಬಿರವನ್ನು ದತ್ತು ಗ್ರಾಮ ಡಂಬಳದಲ್ಲಿ ಹಮ್ಮಿಕೊಳ್ಳಲಾಗಿತ್ತು. ಶಿಬಿರವನ್ನು ಗ್ರಾ.ಪಂ ಸದಸ್ಯ ಸಿದ್ದಪ್ಪ ಹ.ಮುಂಗೋಜಿ ಉದ್ಘಾಟಿಸಿ, ಶಿಬಿರಾರ್ಥಿಗಳಿಗೆ ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳುವ ಕುರಿತು ಸಲಹೆ ನೀಡಿದರು.

ಶಿಬಿರಾಧಿಕಾರಿ ಪ್ರೊ. ಎಸ್. ಎಸ್. ಭಜಂತ್ರಿ ಪ್ರಾಸ್ತಾವಿಕವಾಗಿ ಮಾತನಾಡಿ, ಶಿಬಿರಾರ್ಥಿಗಳಿಗೆ ಶಿಬಿರದ ನಿಯಮ ಹಾಗೂ ವಿದ್ಯಾರ್ಥಿ ಜೀವನದಲ್ಲಿ ಎನ್‌ಎಸ್‌ಎಸ್ ಶಿಬಿರದ ಮಹತ್ವ ಕುರಿತು ತಿಳಿಸಿದರು.

ವೇದಿಕೆಯ ಮೇಲೆ ಪ್ರೊ. ಸಂತೋಷ ಕಿಂದರಿ ಮತ್ತು ಪ್ರೊ. ಆನಂದ ದೇಸಾಯಿಪಟ್ಟಿ ಉಪಸ್ಥಿತರಿದ್ದರು. ಆರ್.ಎಸ್. ಹೀರೆಮಠ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

## ಗಣರಾಜ್ಯೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆ



■ ವಿಜಯಸಾಕ್ಷಿ ಸುದ್ದಿ, ರೋಣ

ರಾಷ್ಟ್ರೀಯ ಹಬ್ಬದ ಸಂದರ್ಭಗಳಲ್ಲಿ ಶಾಲಾ ಮಕ್ಕಳಿಂದ ಆಕರ್ಷಕ ಮೆರವಣಿಗೆಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಇಂತಹ ಸಂದರ್ಭದಲ್ಲಿ ಪೊಲೀಸ್ ಹಾಗೂ ಆರೋಗ್ಯ ಇಲಾಖೆಯವರು ನಿರ್ಲಕ್ಷ್ಯ ವಹಿಸಬಾರದು ಎಂದು ತಹಸೀಲ್ದಾರ್ ಕೆ.ನಾಗರಾಜ ಎಚ್ಚರಿಕೆ ನೀಡಿದರು.

ಅವರು ತಹಸೀಲ್ದಾರ್ ಕಚೇರಿಯ ಸಭಾಂಗಣದಲ್ಲಿ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಕಳೆದ ವರ್ಷ ರಾಜ್ಯೋತ್ಸವದಂದು ಪಟ್ಟಣದ ಸೂಡಿ ವೃತ್ತ, ಮುಲ್ಲಾನ ಭಾವಿ ವೃತ್ತಗಳಲ್ಲಿ ಪೊಲೀಸ್ ಸಿಬ್ಬಂದಿಗಳ ನಿಯೋಜನೆಯಿಲ್ಲದ ಪರಿಣಾಮ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಪೊಲೀಸ್ ಅಧಿಕಾರಿಗಳು ಈ ಸಲದ ಮೆರವಣಿಗೆಯ ಸಂದರ್ಭದಲ್ಲಿ ಮುಲ್ಲಾನ ಭಾವಿ ಹಾಗೂ ಸೂಡಿ ವೃತ್ತಗಳಲ್ಲಿ ನಿಗಾ ವಹಿಸಬೇಕು ಎಂದು ಸಲಹೆ ನೀಡಿದರು.

ಈ ಬಾರಿ ಎಸ್.ಆರ್. ಪಾಟೀಲ ಶಾಲಾ ಆವರಣದಿಂದ ಬೆಳಿಗ್ಗೆ 8.30ಕ್ಕೆ ಮೆರವಣಿಗೆ ಆರಂಭಗೊಂಡು, 9.30ಕ್ಕೆ ತಾಲೂಕಾ ಕ್ರೀಡಾಂಗಣ ತಲುಪಲಿದೆ. 9.40ಕ್ಕೆ ಧ್ವಜಾರೋಹಣ ಕಾರ್ಯ ನೆರವೇರಲಿದೆ ಎಂದ ಅವರು, ಗಣರಾಜ್ಯೋತ್ಸವ ದಿನದಂದು ಸರಕಾರಿ ಕಚೇರಿಗಳನ್ನು ವಿದ್ಯುತ್ ದೀಪಗಳಿಂದ ಸಿಂಗರಿಸಬೇಕು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹನೀಯರನ್ನು ಸನ್ಮಾನಿಸಬೇಕು ಎಂದು ಸಲಹೆ ನೀಡಿದರು.

ಬಿಇಓ ರುದ್ರಪ್ಪ ಹುರಳಿ, ಉಪತಹಸೀಲ್ದಾರ್ ಜೆ.ಟಿ. ಕೊಪ್ಪದ, ಅಕ್ಷರದಾಸೋಹಾಧಿಕಾರಿ ಬಸವರಾಜ ಅಂಗಡಿ, ಜಗದೀಶ ಮಡಿವಾಳರ, ರವೀಂದ್ರ ಪಾಟೀಲ, ಶಿವಪುತ್ರಪ್ಪ ಕಮಸಗಿ ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ



ಇಲ್ಲಿನ ಸಿದ್ದಲಿಂಗ ನಗರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ರಾಧಿಕಾ ಮೊರಬ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿಯ ರಂಗೋಲಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿನಿಯ ಸಾಧನೆಗೆ ಸಭಾಪತಿ ಬಸವರಾಜ್ ಹೊರಟ್ಟಿ, ಡಾ. ಬಸವರಾಜ್ ಧಾರವಾಡ ಎಸ್‌ಡಿಎಂಸಿ ಸರ್ವ ಸದಸ್ಯರು, ಪ್ರಭಾರಿ ಮುಖ್ಯೋಪಾಧ್ಯಾಯೆ ಪಾರ್ವತಿ ವಸ್ತ್ರದ, ಶಿಕ್ಷಕ ವೃಂದದ ಜಯಲಕ್ಷ್ಮೀ ಅಣ್ಣಿಗೇರಿ, ಶಶಿಕಲಾ ಗುಳೆದವರ, ಸರ್ವಮಂಗಳ ಪತ್ತಾರ್, ಶಂಕ್ರಮ್ಮ ಹಣಮಗೌಡರ, ಶಾರದಾ ಬಾಣದ, ಶೋಭಾ ಗಾಳಿ, ಎಸ್.ಯು. ಕುಷ್ಟಗಿ, ಸಂಜೀವಿನಿ ಕೂಲಗುಡಿ, ವಿ.ಬಿ. ಶಿವನ ಗೌಡರ, ನಾಗಪ್ಪ ಶಿರೋಳ, ರಮೇಶ ಬಸರಿ, ಪದ್ಮಾವತಿ ದಾಸರ ಸೇರಿದಂತೆ ಶಾಲೆಯ ಎಲ್ಲ ಶಿಕ್ಷಕ ವೃಂದದವರು ಶುಭ ಕೋರಿದ್ದಾರೆ.

### ರಾಮಕರುಣಾನಂದ ಮಠದಲ್ಲಿ 'ಸಿರಿಧಾನ್ಯ ಮಾತು' ಕಾರ್ಯಕ್ರಮ

## ಸಿರಿಧಾನ್ಯಗಳು ಆರೋಗ್ಯ ಕಾಪಾಡುವ ಸರಿಧಾನ್ಯಗಳು

■ ವಿಜಯಸಾಕ್ಷಿ ಸುದ್ದಿ, ಗದಗ



ಸಿರಿಧಾನ್ಯಗಳ ಬಳಕೆಯಿಂದ ನಮ್ಮ ಆರೋಗ್ಯ ಸ್ವಾಸ್ಥ್ಯವನ್ನು ಕಾಪಾಡಬಹುದು. ಸಿರಿಧಾನ್ಯಗಳು ನಮ್ಮ ಆರೋಗ್ಯ ಕಾಪಾಡುವ ಸರಿಧಾನ್ಯಗಳಾಗಿವೆ ಎಂದು ಪದ್ಮಶ್ರೀ ಪುರಸ್ಕೃತ ಆಹಾರ ತಜ್ಞ ಡಾ. ಖಾದರ್ ವಲಿ ಅಭಿಪ್ರಾಯಪಟ್ಟರು.

ಅವರು ತಾಲೂಕಿನ ಬಿಂಕದಕಟ್ಟಿ ಗ್ರಾಮದ ರಾಮಕರುಣಾನಂದ ಮಠದ ಆವರಣದಲ್ಲಿ ಕೃಷಿ ಇಲಾಖೆಯ ಸಹಯೋಗದಲ್ಲಿ ನಡೆದ 'ಸಿರಿಧಾನ್ಯ ಮಾತು' ಕಾರ್ಯಕ್ರಮದಲ್ಲಿ ಮಾತನಾಡಿ,

ಜನರ ಜೀವನ ಶೈಲಿ ಅಪಾಯಕಾರಿ ಮಟ್ಟದಲ್ಲಿ ಬದಲಾಗಿದ್ದು, ಆಹಾರ ಪದ್ಧತಿಯು ರೋಗ ಹರಡುವ ರೀತಿಯಲ್ಲಿದೆ. ಹಿಂದಿನ ಕಾಲದಲ್ಲಿ ನಮ್ಮ ಆರೋಗ್ಯ ಅಡುಗೆ ಮನೆಯಲ್ಲಿತ್ತು. ಇಂದು ನಾವು ಆರೋಗ್ಯವನ್ನು ಆಸ್ಪತ್ರೆಗಳಲ್ಲಿ ಹುಡುಕುತ್ತಾ ಇದ್ದೇವೆ. ಇದೇ ಪರಿಸ್ಥಿತಿ ಮುಂದುವರೆದರೆ ಭವಿಷ್ಯದಲ್ಲಿ ಆರೋಗ್ಯವಂತ ಸಮಾಜವನ್ನು ಕಾಣುವುದು ಕಷ್ಟ. ಹಾಗಾಗಿ ಆರೋಗ್ಯವಂತ ಸಮಾಜಕ್ಕಾಗಿ ಸಿರಿಧಾನ್ಯಗಳನ್ನು ಆಹಾರವಾಗಿ ಅಳವಡಿಸಿಕೊಳ್ಳುವುದು ಅನಿವಾರ್ಯ ಎಂದರು.

ಸಹಾಯಕ ಕೃಷಿ ನಿರ್ದೇಶಕ ಮಲ್ಲಯ್ಯ ಕೊರವನವರ ಪ್ರಸ್ತಾವಿಕವಾಗಿ ಮಾತನಾಡಿ. ಡಾ.ಖಾದರ್ ವಲಿಯವರು ಸಿರಿಧಾನ್ಯ ಬಳಕೆಯ ಮೂಲಕ ಉತ್ತಮ ಆರೋಗ್ಯಕರ ಸಮಾಜದ ಗುರಿ ಇಟ್ಟುಕೊಂಡು ಉತ್ತಮ ಕೆಲಸ ಮಾಡುತ್ತಿದ್ದಾರೆ. ಸಿರಿಧಾನ್ಯ ಮಹತ್ವದ ಕುರಿತು ದೇಶದಾದ್ಯಂತ ಜಾಗೃತಿ ಮೂಡಿಸುವ ಅವರು ಇಲ್ಲಿಗೆ ಆಗಮಿಸಿರುವುದು ಖುಷಿಯ ಸಂಗತಿ. ಅವರ ಜ್ಞಾನ ಹಳ್ಳಿಹಳ್ಳಿಯ ರೈತರನ್ನು ತಲುಪಿದಾಗ ಬದಲಾವಣೆ ಸಾಧ್ಯ ಎಂದರು.

ಅಂತಾರಾಷ್ಟ್ರೀಯ ಸಿರಿಧಾನ್ಯ ಮೇಳದಲ್ಲಿ ನಡೆದ ಸಿರಿಧಾನ್ಯ ಪಾಕಸ್ಪರ್ಧೆಯಲ್ಲಿ ಭಾಗವಹಿಸಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿರುವ ಗ್ರಾಮದ ಅಕ್ಷತಾ ಮೂಲಿಮನಿಯವರನ್ನು ಸನ್ಮಾನಿಸಲಾಯಿತು.

ಬಿಂಕದಕಟ್ಟಿ ಗ್ರಾ.ಪಂ ಅಧ್ಯಕ್ಷ ಪಿ.ಪಿ. ನದಾಫ್ ಹಾಗೂ ಸದಸ್ಯರು, ರವೀಂದ್ರ ಮೂಲಿಮನಿ, ಸರೋಜಮ್ಮ ಅಗಸನಕೊಪ್ಪ ಹಾಜರಿದ್ದರು. ರಾಜರಾಜೇಶ್ವರಿ ಚಿನಿವಾಲರ ಸ್ವಾಗತಿಸಿದರು. ಬಸವರಾಜೇಶ್ವರಿ ಸಜ್ಜನರ ನಿರೂಪಿಸಿ ವಂದಿಸಿದರು.

## ಸ್ವಯಂಪ್ರೇರಿತ ರಕ್ತದಾನ ಶಿಬಿರ ನಾಳೆ

■ ವಿಜಯಸಾಕ್ಷಿ ಸುದ್ದಿ, ಗದಗ



ರಾಷ್ಟ್ರೀಯ ಯುವ ದಿನಾಚರಣೆ ಹಾಗೂ ಸಹಕಾರಿ ಧುರಿಣ ಎಂ.ವಿ. ಮೂಲಿಮನಿಯವರ 93ನೇ ಜಯಂತ್ಯುತ್ಸವದ ಅಂಗವಾಗಿ ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ಕಲಾ, ವಿಜ್ಞಾನ, ವಾಣಿಜ್ಯ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಕೇಂದ್ರ ಬಿ.ಸಿ.ಎ. ಮಹಾವಿದ್ಯಾಲಯ ಹಾಗೂ ಬಿ.ಬಿ.ಎಲ್. ಎಲ್.ಬಿ ಮಹಾವಿದ್ಯಾಲಯಗಳ ಸಂಯುಕ್ತ ಆಶ್ರಯದಲ್ಲಿ ಜ. 12ರಂದು ಸ್ವಯಂಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿದೆ.

ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ನಡೆಯುವ ಈ ಶಿಬಿರದಲ್ಲಿ ಉತ್ಸಾಹಿ ರಕ್ತದಾನಿಗಳು ಆಗಮಿಸಿ ರಕ್ತದಾನ ಮಾಡಬಹುದೆಂದು ಪ್ರಾ. ಎಲ್.ಎಸ್. ಪಾಟೀಲರು ಹಾಗೂ ಸಿಬ್ಬಂದಿ ವರ್ಗದವರು ವಿನಂತಿಸಿದ್ದಾರೆ.

## ರೈಲ್ವೆ ಇಲಾಖೆಯ ಖಾಸಗೀಕರಣಕ್ಕೆ ಹುನ್ನಾರ



■ ವಿಜಯಸಾಕ್ಷಿ ಸುದ್ದಿ, ಗದಗ

ಸೌತ್ ವೆಸ್ಟರ್ನ್ ರೈಲ್ವೆ ಮಜ್ದೂರ ಯೂನಿಯನ್ ವತಿಯಿಂದ ಕಳೆದ 4 ದಿನಗಳಿಂದ ಗದಗ ನಗರದ ರೈಲ್ವೆ ನಿಲ್ದಾಣದೆದುರು 01–01–2004ರ ನಂತರ ನೇಮಕಾತಿಯಾದ ಎಲ್ಲಾ ರೈಲ್ವೆ ಕಾರ್ಮಿಕರಿಗೆ ಹೊಸ ಪೆನ್ಶನ್ ಪದ್ಧತಿಯನ್ನು ರದ್ದು ಮಾಡಿ, ಹಳೆಯ ಪೆನ್ಶನ್ ಪದ್ಧತಿಯನ್ನು ಜಾರಿಗೆ ಮಾಡಬೇಕೆಂದು ಒತ್ತಾಯಿಸಿ ಕೈಗೊಂಡಿರುವ ಸರದಿ ಉಪವಾಸ ಸತ್ಯಾಗ್ರಹ ನಾಲ್ಕನೇ ದಿನಕ್ಕೆ ಮುಂದುವರೆಯಿತು.

ಯೂನಿಯನ್ ಕಾರ್ಯದರ್ಶಿ ನೂರಅಹ್ಮದ ಮಾತನಾಡಿ, ಈ ಹೊಸ ಪಿಂಚಣಿಯಿಂದ ರೈಲ್ವೆ ಕಾರ್ಮಿಕರಿಗೆ ನಿವೃತ್ತಿಯಾದ ನಂತರ ಜೀವನ ಕಷ್ಟಕರವಾಗುತ್ತದೆ. ಆರೋಗ್ಯ, ಕುಟುಂಬ ನಿರ್ವಹಣೆ, ಮಕ್ಕಳ ವಿದ್ಯಾಭ್ಯಾಸಗಳಿಗೆ ಈ ಹೊಸ ಪಿಂಚಣಿಯಿಂದ ಬಹಳ ತೊಂದರೆಯಾಗುತ್ತದೆ. ದೇಶದಲ್ಲಿಯೇ ಅತ್ಯಂತ ಹೆಚ್ಚು ನೌಕರರು ಇರುವ ರೈಲ್ವೆ ಇಲಾಖೆಯನ್ನು ಖಾಸಗೀಕರಣ ಮಾಡುವ ಹುನ್ನಾರ ಅಡಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯೂನಿಯನ್‌ನ ಉಪಾಧ್ಯಕ್ಷ ಮಂಜುನಾಥ ಬಾಗಲಕೋಟಿ ಮಾತನಾಡಿ, ಹೊಸ ಪಿಂಚಣಿ ಪದ್ಧತಿಯು ರೈಲ್ವೆ ನೌಕರರ ನೆಮ್ಮದಿಯನ್ನು ಕಿತ್ತುಕೊಂಡಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ನೌಕರದಾರರಾದ ದೀಪಕ ಗಾಗಡೆ, ಎಂ.ಎಂ. ಬಾಗಲಕೋಟ, ಸುರೇಶ ಹೆಚ್. ಮುಧೋಳ, ಯು.ಬಾಬು ರಂಜನ, ಅರ್ಶೀದ್ ವಾಡನಕಟ್ಟಿ, ರಾಮಕೃಷ್ಣ ಕೊರವಾರ, ಅರವಿಂದ ಕುಮಾರ, ನವೀನಕುಮಾರ ಬಾಗಲಕೋಟೆ, ಉಮೇಶ ಕುರಿ, ವಿಶ್ವನಾಥ ಹೆಚ್., ಜಯಶ್ರೀ ತುರಕಾಣಿ, ಅನ್ನಪೂರ್ಣ ಕಟ್ಟಿಮನಿ, ದೀಪಾ ಪಾಟೀಲ, ಜಯಶ್ರೀ ಗಾಜಿ ಸೇರಿದಂತೆ ನೂರಾರು ನೌಕರರು ಉಪಸ್ಥಿತರಿದ್ದರು.

## ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆ




■ ವಿಜಯಸಾಕ್ಷಿ ಸುದ್ದಿ, ಗದಗ

ನೆಹರು ಯುವ ಕೇಂದ್ರ ಗದಗ ಮತ್ತು ಕೆಎಲ್‌ಇ ಸಂಸ್ಥೆಯ ಜಗದ್ಗುರು ತೋಂಟದಾರ್ಯ ಮಹಾವಿದ್ಯಾಲಯ ಮತ್ತು ಇನ್ಸ್ಟಿಟ್ಯೂಷನ್ ಇನೋವೇಶನ್ ಕೌನ್ಸಿಲ್ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಪಿ.ಜಿ. ಪಾಟೀಲ್ ಮಾತನಾಡಿ, 2047ರಲ್ಲಿ ಭಾರತವು ಯಾವ ರೀತಿ ಇರಬೇಕು ಎಂದು ಯುವ ಜನತೆ ತಮ್ಮ ಚಿಂತನೆಗಳನ್ನು ಭಾಷಣದ ಮೂಲಕ ತಿಳಿಸಿದ್ದಾರೆ. ಇಂದಿನ ಯುವ ಭವಿಷ್ಯದ ಭಾರತವನ್ನು ಅಭಿವೃದ್ಧಿ ಪಡಿಸಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ನೆಹರು ಯುವ ಕೇಂದ್ರದ ಜಿಲ್ಲಾ ಯುವ ಸಮನ್ವಯಾಧಿಕಾರಿ ಎನ್. ರಂಜನಿ ಮಾತನಾಡಿ, ಯುವಕರು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸವ ಮೂಲಕ ದೇಶಕ್ಕೆ ಹೊಸ ಚಿಂತನೆಗಳನ್ನು ನೀಡಬೇಕು ಎಂದರು.

ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಭೀಮವ್ವ ಹಿರೇಮನಿ, ದ್ವಿತೀಯ ಸ್ಥಾನ ಬಿ.ಮಾನ್ಯ ಶೆಟ್ಟಿ, ಮತ್ತು ತೃತೀಯ ಸ್ಥಾನ ಅಲಿಯಾಪಾತಿಮಾ ಜೈದಿ ಪಡೆದುಕೊಂಡರು. ಡಾ.ಕುಮಾರ್ ಎಚ್.ಕೆ. ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಪ್ರೊ. ವಿಶ್ವನಾಥ, ರವಿಕುಮಾರ್ ಎಚ್., ಪ್ರೊ. ನಾಗರಾಜ್ ಪಾಲ್ಗೊಂಡಿದ್ದರು.


**ಪುರಸಭೆ ಕಾರ್ಯಾಲಯ, ರೋಣ ಜಿ: ಗದಗ, ಕರ್ನಾಟಕ–582209**

ದೂರವಾಣಿ : 08381-267234 Email : itstaff_ulb_ron@yahoo.in
Website : www.ronatown.mrc.gov.in

ಕ್ರ.ಸಂ/ಪುಸರೋ/ಕು.ನಿ.ಸ.ಪ/ವಹಿ/ /2023–24 ದಿನಾಂಕ : 10–01–2024

**ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ ಮುಖಾಂತರ)**

ರೋಣ ಪುರಸಭೆಯಿಂದ ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ –2000 ರ ಪ್ರಕಾರ "ಇ–ಪ್ರಕ್ಯೂರಮೆಂಟ್" ಪದ್ದತಿಯಲ್ಲಿ ಸನ್. 2023–24 ನೇ ಸಾಲಿನ SDRF-NDRF ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ನಿಧಿಯ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಎ.ಡಬ್ಲ್ಯು/ಕೆ.ಜಿ ದಾಸ್ತಾವೇಜಿನಲ್ಲಿ "ಇ–ಪ್ರಕ್ಯೂರಮೆಂಟ್" ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಮರು ಟೆಂಡರಗೆ ಆಹ್ವಾನಿಸಲಾಗಿದೆ. ಟೆಂಡರನ್ನು ಇ–ಪ್ರಕ್ಯೂರಮೆಂಟ ವೆಬ್‌ಸೈಟ್ **www.ronatown.mrc.gov.in/Tenders**, ಅಥವಾ **https://kppp.karnataka.gov.in/** ಮೂಲಕ ಷರತ್ತುಗಳಂತೆ ಟೆಂಡರ ಹಾಕಲು ಪ್ರಚಾರ ಪಡಿಸಲಾಗಿದೆ.

| ಅ. ನಂ. | ಇಂಡೆಂಟ್ ನಂಬರ |
|---|---|
| 1 | **DMA/2023-24/SE1907** |

**ಸೂಚನೆ** : ಸದರ ಟೆಂಡರಗಳಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳಿದ್ದಲ್ಲಿ ಇ–ಪ್ರಕ್ಯೂರಮೆಂಟ ಪ್ರೋಟಲ್‌ನಲ್ಲಿ ಮಾತ್ರ ಪ್ರಕಟಣೆ ಮಾಡಲಾಗುವುದು.

**ನಿರ್ಧಾರಿತ ದಿನಾಂಕಗಳ ವಿವರ** : (1) ದಿನಾಂಕ : **23–01–2024** ಸಾಯಂಕಾಲ 5–30 ಘಂಟೆವರೆಗೆ ಇ–ಪ್ರಕ್ಯೂರಮೆಂಟನಲ್ಲಿ ಟೆಂಡರ ಫಾರ್ಮಗಳಿಗೆ ಅರ್ಜಿ ಸಲ್ಲಿಸಬಹುದು. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **25–01–2024** (3) ಆರ್ಥಿಕ ಬಿಡ್ ತೆರೆಯುವ ದಿನಾಂಕ : **29–01–2024**

ಸಹಿ/– ಮುಖ್ಯಾಧಿಕಾರಿ,
ಪುರಸಭೆ ರೋಣ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/445/2023–24


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka